# ದೆಹಲಿ ಕರ್ನಾಟಕ ಸಂಘದ ಅಭಿಮತ

ಜೂನ್ 2012
ಬೆಲೆ ರೂ. 1



ಸುಡು ಬಿಸಿಲಿನ ದಣಿವು ; ಮಡು ನೀರಿನ ತಣಿವು. ದೆಹಲಿ ! ಓ, ದೆಹಲಿ !

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ಆಶ್ಡೆನ್ ಸ್ವರ್ಣ ಪ್ರಶಸ್ತಿ




ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಗೆ ವಿಶ್ವದ ಪ್ರತಿಷ್ಠಿತ ಆಶ್ಡೆನ್ ಸ್ವರ್ಣ ಪ್ರಶಸ್ತಿ ದೊರಕಿದೆ. ಲಂಡನ್ ರಾಯಲ್ ಜಿಯೋಗ್ರಾಫಿಕಲ್ ಸೊಸೈಟಿಯಲ್ಲಿ ಮೇ 30ರಂದು ನಡೆದ ಸಮಾರಂಭದಲ್ಲಿ ವಿಶ್ವಸಂಸ್ಥೆ ಕೈಗಾರಿಕಾ ಅಭಿವೃದ್ಧಿ ಘಟಕ ಮುಖ್ಯಸ್ಥ ಡಾ. ಖಾಂಡೆ ಯುಂಕೆಲ್ಲಾ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಅಧ್ಯಕ್ಷ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಪೂರ್ವ ಆಫ್ರಿಕಾದ ಬೇರ್‌ಪೂಟ್ ಪವರ್ ಸಂಸ್ಥೆ, ಇಂಡೋನೇಷ್ಯಾದ ಇಬೆಕಾ, ಕಾಂಬೋಡಿಯಾದ ಐಡಿಇ, ಅಫಘಾನಿಸ್ತಾನದ ಬಿಜ್ ಸಂಸ್ಥೆಗಳೊಂದಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 'ಗ್ರೀನ್ ಆಸ್ಕರ್' ಪ್ರಶಸ್ತಿ ಎಂದೇ ಹೆಸರಾಗಿರುವ ಈ ಪ್ರತಿಷ್ಠಿತ ಪ್ರಶಸ್ತಿ 40,000 ಪೌಂಡ್ (ರೂ. 34.80 ಲಕ್ಷ) ನಗದು ಬಹುಮಾನ ಹಾಗೂ ಫಲಕವನ್ನು ಒಳಗೊಂಡಿದೆ.

ಗ್ರಾಮಾಭಿವೃದ್ಧಿ ಯೋಜನೆ ನಡೆಸುತ್ತಿರುವ ದುರ್ಬಲ ವರ್ಗದವರ ಇಂಧನ ಅಗತ್ಯಗಳಿಗೆ ನೆರವು ನೀಡುವ ಕಿರು ಆರ್ಥಿಕ ವ್ಯವಹಾರ ಕಾರ್ಯಕ್ರಮ ಗುರುತಿಸಿದ ಆಯ್ಕೆ ಸಮಿತಿ, ಸಾಧನೆಯನ್ನು ಮುಕ್ತಕಂಠದಿಂದ ಹೊಗಳಿದೆ. ಆಶ್ಡನ್ ಸ್ಥಾಪಕ ನಿರ್ದೇಶಕ ಸಾರಾ ಬಟ್ಲರ್ ಸ್ಲಾಸ್ ಮಾತನಾಡಿ, ಪ್ರಶಸ್ತಿ ಪುರಸ್ಕೃತರು ಬಡತನ ನಿರ್ಮೂಲನೆಗಾಗಿ ಮಾಡಿದ ಸಾಧನೆ ಅನುಕರಣೀಯ ಮತ್ತು ಹೊಸ ಆಶಾವಾದ ಹುಟ್ಟುಹಾಕಿವೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಜನರು ತಮ್ಮ ಅಗತ್ಯ ಪೂರೈಸಲು ಜವಾಬ್ದಾರಿಯುತ ಆರ್ಥಿಕ ನೆರವು ಪಡೆಯಲು ಪ್ರಮುಖ ಪಾತ್ರ ವಹಿಸಿದೆ ಎಂದರು.

ಪ್ರಶಸ್ತಿ ಸ್ವೀಕರಿಸಿದ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, ಎಲ್ಲರನ್ನೂ ಸಶಕ್ತರನ್ನಾಗಿಸಿ ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವುದು ನಮ್ಮ ಧ್ಯೇಯ ಮತ್ತು ಗುರಿ ಎಂದರು.

ಸಾಧನೆ : 1982ರಲ್ಲಿ ಡಾ. ವೀರೇಂದ್ರ ಹೆಗ್ಗಡೆ ಅಧ್ಯಕ್ಷತೆಯಲ್ಲಿ ಪ್ರಾರಂಭಗೊಂಡ ಗ್ರಾಮಾಭಿವೃದ್ಧಿ ಯೋಜನೆ ಸ್ವಸಹಾಯ ಸಂಘಗಳ ಮೂಲಕ ಬಡವರ ಇಂಧನ ಅಗತ್ಯ ಪೂರೈಸಲು ಕಿರು ಸಾಲ ಸೌಲಭ್ಯ ಒದಗಿಸುವ ಕಾರ್ಯದಲ್ಲಿ ಯಶಸ್ಸು ಸಾಧಿಸಿದೆ. ಯೋಜನೆ ರಾಜ್ಯದ 20 ಸಾವಿರ ಹಳ್ಳಿಗಳಲ್ಲಿ ಹಾಗೂ 200 ದೊಡ್ಡ ಹಾಗೂ ಸಣ್ಣ ಪಟ್ಟಣಗಳಲ್ಲಿ ವ್ಯಾಪಿಸಿದೆ. ಮಾನವ ಸಂಪನ್ಮೂಲವೇ ತಳಪಾಯವಾಗಿರುವ ಇದರಲ್ಲಿ ಮಹಿಳಾ ಸಬಲೀಕರಣ, ಕೃಷಿ, ಆರೋಗ್ಯ ರಕ್ಷಾ ವಿಮೆ ಸೇರಿ ಹಲವು ಯೋಜನೆಗಳು ಒಳಗೊಂಡಿವೆ. ಇದರಲ್ಲಿ 7ಸಾವಿರ ಮಂದಿ ಪೂರ್ಣಾವಧಿಯಾಗಿ, ಸಾವಿರಾರು ಜನ ಅರೆಕಾಲಿಕ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಆರ್ಥಿಕಾಭಿವೃದ್ಧಿ, ಉಳಿತಾಯ ಮನೋಭಾವನೆ, ಕುಟುಂಬ ಆರೋಗ್ಯ ರಕ್ಷಣೆ ಜೊತೆಯಲ್ಲಿ ಶಕ್ತಿ ಸಂಪನ್ಮೂಲಗಳಿಗೆ ಮಹತ್ವ ನೀಡುತ್ತಾ ಬಂದಿದೆ.

ರಾಜ್ಯದ ವಿವಿಧೆಡೆ 88 ಯೋಜನಾ ಕಚೇರಿ, ಮೂರು ತರಬೇತಿ ಸಂಸ್ಥೆ, ನಾಲ್ಕು ಸಾವಿರಕ್ಕೂ ಹೆಚ್ಚು ಗ್ರಾಮಾಂತರ ಕಚೇರಿಗಳನ್ನು ಹೊಂದಿದೆ. ಸಿರಿ ಗ್ರಾಮೋದ್ಯೋಗ ಸಂಸ್ಥೆ ಪ್ರತ್ಯೇಕ ಕಚೇರಿ ಹೊಂದಿದೆ. ಇದುವರೆಗೆ 1,69,000 ಸ್ವಸಹಾಯ ಸಂಘಗಳನ್ನು ರಚಿಸಿದ್ದು 18,68,972 ಸದಸ್ಯರಿದ್ದಾರೆ, 32,910 ಕೃಷಿಕ ಸ್ವಸಹಾಯ ಸಂಘಗಳಿವೆ. 450ಕೋಟಿ ರೂ. ಉಳಿತಾಯ ಮಾಡಿದ್ದು, 4,427 ಕೋಟಿ ರೂ ಸಾಲದ ವ್ಯವಹಾರ ಮಾಡಲಾಗಿದೆ. ರಾಷ್ಟ್ರೀಯ, ಸ್ಥಳೀಯ ಸಂಘ ಸಂಸ್ಥೆಗಳಿಂದ ಮೆಚ್ಚುಗೆ ಪಡೆದಿರುವ ಸಂಸ್ಥೆಗೆ ಇದೀಗ ಅಂತರಾಷ್ಟ್ರೀಯ ಪ್ರಶಸ್ತಿ ಲಭಿಸಿದ ಹೆಮ್ಮೆ. ಟ್ರಸ್ಟಿಗಳಾದ ಹೇಮಾವತಿ ವಿ. ಹೆಗ್ಗಡೆ, ಕಾರ್ಯನಿರ್ವಾಹಕ ನಿರ್ದೇಶಕ ಡಾ. ಎಲ್. ಎಚ್. ಮಂಜುನಾಥ್ ಪ್ರಶಸ್ತಿ ಸಮಾರಂಭದ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಗ್ರಾಮೀಣ ರೈತ ಕುಟುಂಬಗಳನ್ನು ಆರ್ಥಿಕವಾಗಿ ಬಲಪಡಿಸುವ ಈ ಯೋಜನೆಯನ್ನು ಪ್ರಾರಂಭಿಸಿ ಯಶಸ್ವಿಯಾಗಿ ನಿರ್ವಹಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾದರಿಯಾದ ಈ ಯೋಜನೆಯ ಅಧ್ಯಕ್ಷ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಈ ಮಹತ್ತರ ಯೋಜನೆ ರಾಷ್ಟ್ರವ್ಯಾಪಿಯಾಗಿ ಬಡರೈತರ ದಾರಿದೀಪವಾಗಲಿ ಎಂದು ಶುಭ ಹಾರೈಸುತ್ತೇವೆ.**

# ಸಿಂಡಿಕೇಟ್ ಬ್ಯಾಂಕಿನ ಮಹಾ ಪ್ರಬಂಧಕ ಕೆ. ದೇವಾನಂದ ಉಪಾಧ್ಯಾಯ ಸೇವಾ ನಿವೃತ್ತಿ

ಸಿಂಡಿಕೇಟ್ ಬ್ಯಾಂಕ್‌ನ ಮಹಾ ಪ್ರಬಂಧಕರಾಗಿದ್ದ ಕಾರ್ಕಳ ದೇವಾನಂದ ಉಪಾಧ್ಯಾಯರು ಸೇವಾ ನಿವೃತ್ತಿ ಹೊಂದಿದ್ದು ಮುಂಬೈಯಲ್ಲಿ ನಡೆದ ಬ್ಯಾಂಕ್‌ನ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಆತ್ಮೀಯವಾಗಿ ವಿದಾಯ ಹೇಳಿ ಬೀಳ್ಕೊಡಲಾಯಿತು. ದೇವಾನಂದ ಉಪಾಧ್ಯಾಯರ ಅನನ್ಯ ಸೇವೆಯನ್ನು ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಬಸಂತ್ ಸೇಟ್ ಸ್ಮರಿಸಿದರು.

ತಮ್ಮ 40 ವರ್ಷಗಳ ಸುದೀರ್ಘ ಬ್ಯಾಂಕಿಂಗ್ ಸೇವೆಯಲ್ಲಿ ಹನ್ನೊಂದು ವರ್ಷಗಳನ್ನು ದೆಹಲಿಯಲ್ಲೇ ಕಳೆದ ದೇವಾನಂದ ಉಪಾಧ್ಯಾಯರು ನಾಡು–ಹೊರನಾಡಿನಲ್ಲಿ ಕನ್ನಡಪರ ಚಟುವಟಿಕೆಯನ್ನು ಅತ್ಯಂತ ಪ್ರೀತಿಯಿಂದ ಕೈಗೊಂಡಿದ್ದರು. ದೆಹಲಿ ಕರ್ನಾಟಕ ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದಲ್ಲಿ ಹೊರತಂದ ಅಭಿಮತ ವಿಶೇಷ ಸ್ಮರಣ ಸಂಚಿಕೆಯ ಗೌರವ ಸಂಪಾದಕರಾಗಿದ್ದವರು ದೇವಾನಂದ ಉಪಾಧ್ಯಾಯರು. ಆ ಸಂಚಿಕೆಗಾಗಿ ಅವರು 14 ಲಕ್ಷಕ್ಕೂ ಮಿಗಿಲಾದ ಜಾಹೀರಾತು ಹಣ ಸಂಗ್ರಹಿಸಿದ್ದು ಒಂದು ವಿಶಿಷ್ಟ ಸಾಧನೆ. ಅಲ್ಲದೇ ದೆಹಲಿ ಕರ್ನಾಟಕ ಸಂಘದ ಮುಂಬಾಗಿಲಿನಲ್ಲಿರುವ ದ್ವಾರಪಾಲಕ ಮೂರ್ತಿಗಳನ್ನು ಸ್ಥಾಪಿಸಲು ಸಿಂಡಿಕೇಟ್ ಬ್ಯಾಂಕಿನಿಂದ ಮೂರು ಲಕ್ಷ ರೂಪಾಯಿಗಳ ಅನುದಾನವನ್ನು ಕೊಡಿಸುವಲ್ಲಿ ನೆರವಾಗಿದ್ದಾರೆ. ದೆಹಲಿಯ ಕನ್ನಡ ಬಳಗ, ರಾಜೇಂದ್ರ ನಗರದ ಪ್ರಥಮ ಅಧ್ಯಕ್ಷರಾಗಿದ್ದ ಅವರು ಆ ಸಂಸ್ಥೆಯನ್ನು ಜನಪ್ರಿಯಗೊಳಿಸಿದ್ದರು. ಗಲ್ಫ್ ರಾಷ್ಟ್ರ ದೋಹಾ ಕತಾರ್‌ನಲ್ಲೂ ಕರ್ನಾಟಕ ಸಂಘ ಮತ್ತು ತುಳು ಕೂಟವನ್ನು ಸ್ಥಾಪಿಸಿದ ಕೀರ್ತಿ ಅವರದ್ದು. ಕರ್ನಾಟಕ ರಾಜ್ಯ ಜೇಸೀಸ್‌ನ ಅಧ್ಯಕ್ಷರಾಗಿದ್ದ ಉಪಾಧ್ಯಾಯರು ಮುಂದೆ ಭಾರತೀಯ ಜ್ಯೂನಿಯರ್ ಛೇಂಬರ್‌ನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.



ಸಿಂಡಿಕೇಟ್ ಬ್ಯಾಂಕ್‌ನ ಮಹಾಪ್ರಬಂಧಕರಾಗಿ ದೆಹಲಿ ಪ್ರದೇಶದಲ್ಲಿ 40,000 ಕೋಟಿ ರೂಪಾಯಿ ವ್ಯವಹಾರ ನಡೆಸಿದ ಉಪಾಧ್ಯಾಯರು ಹಂತ ಹಂತವಾಗಿ ವೃತ್ತಿ ಬದುಕಿನ ಉನ್ನತ ಮಜಲುಗಳನ್ನು ತಲುಪಿದ್ದರು. ಶ್ರೇಷ್ಠ ದೆಹಲಿ ಕನ್ನಡಿಗ ಪ್ರಶಸ್ತಿ, ಬೆಂಗಳೂರಿನ ಹಂಸ ಪ್ರಶಸ್ತಿ ಹಾಗೂ 'ಸಾಧನಾ ಚೈತ್ರ' ಪ್ರಶಸ್ತಿ ಗಳಿಸಿರುವ ದೇವಾನಂದ ಉಪಾಧ್ಯಾಯರ ನಿವೃತ್ತಿಯ ಬದುಕು ಸುಖಕರವಾಗಲಿ. ಇನ್ನು ಮುಂದೆಯೂ ಸಮಾಜಕ್ಕೆ ಅವರ ಕೊಡುಗೆಗಳು ಸಲ್ಲುವಂತಾಗಲಿ ಎಂಬ ಆಶಯ ನಮ್ಮದು.

❑ ವೈ. ಅವನೀಂದ್ರನಾಥ್ ರಾವ್

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 22 ಸಂಚಿಕೆ 9
ಜೂನ್ 2012, ಬೆಲೆ ರೂ. 1

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಮತ್ತು ಹಿಂಬದಿ ಚಿತ್ರ
ಆನಂದ ಈಶ್ವರಪ್ಪ ಮುರಗೋಡ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ಮನದ ಮಾತು

ಶೈಶವಾಸ್ಥೆಯಲ್ಲಿ ಮೃತರಾಗುತ್ತಿದ್ದ ಹಸುಳೆಗಳ ಬಗ್ಗೆ ನಾವು ಸಾಕಷ್ಟು ತಿಳಿದಿದ್ದೇವೆ. ಅಪೌಷ್ಟಿಕ ಆಹಾರ, ಗರ್ಭಿಣಿಯರ ಅನಾರೋಗ್ಯ, ಅನ್ನಾಂಗಗಳ ಕೊರತೆ–ಹೀಗೆ ಹತ್ತು ಹಲವು ಕಾರಣಗಳಿಂದ ಶಿಶುಗಳು ಜಗತ್ತಿನ ಗಾಳಿ, ಬೆಳಕು ಅನುಭವಿಸದೆ ಗತ ಪ್ರಾಣವಾಗುತ್ತಿವೆ. ಈ ಅನಾಹುತವನ್ನು ತಪ್ಪಿಸಲು ಜಗತ್ತಿನಾದ್ಯಂತ, ಅದರಲ್ಲೂ ನಮ್ಮ ದೇಶದಲ್ಲಿ ಅನೇಕ ಯೋಜನೆಗಳನ್ನು ಸರ್ಕಾರ ಜಾರಿಗೆ ತಂದಿದೆ. ನಿಜ ಹೇಳಬೇಕೆಂದರೆ ಸರ್ಕಾರದ ಹಾಗೂ ಸಂಘ ಸಂಸ್ಥೆಗಳ ನಿರಂತರ ಪ್ರಯತ್ನದ ಫಲವಾಗಿ ಶಿಶುಗಳ ಮರಣದ ಪ್ರಮಾಣ ಕೊಂಚಮಟ್ಟಿಗೆ ಇಳಿಮುಖವಾಗಿದೆ. ಆದರೆ ಈಗ ಜಗತ್ತನ್ನು ಬಾಧಿಸುತ್ತಿರುವುದು ಹದಿಹರೆಯದವರ (ಬಾಲ್ಯ ಹಾಗೂ ಪ್ರಬುದ್ಧ ವಯಸ್ಕರ ನಡುವಿನ ವಯೋಮಾನದವರು) ಮರಣದ ಪ್ರಮಾಣ ಗಣನೀಯವಾಗಿ ಏರುತ್ತಿರುವುದು. ಜಗತ್ತಿನ 1.2 ಬಿಲಿಯನ್ ಹದಿ ಹರೆಯದವರ ಬಗ್ಗೆ ನಾವು ಸಾಕಷ್ಟು ಗಮನ ವಹಿಸಬೇಕು. ಹತ್ತರಿಂದ ಹತ್ತೊಂಭತ್ತು ವಯಸ್ಸಿನ ಈ ಹದಿವಯಸ್ಸಿನವರಲ್ಲಿ ಪ್ರತಿವರ್ಷ 1.4ಮಿಲಿಯನ್ ಹುಡುಗ ಹುಡುಗಿಯರು ಅಪಮೃತ್ಯು ಅಥವ ಮೃತ್ಯುವಿಗೆ ಬಲಿಯಾಗುತ್ತಿದ್ದಾರೆ. ಕಾರಣ–ಅಪಘಾತಗಳು, ಶಕ್ತಿಹೀನತೆ, ಹೆರಿಗೆಯ ಸಮಸ್ಯೆಗಳು, ಆತ್ಮಹತ್ಯೆಗಳು, ಏಯ್ಡ್ಸ್ ಹಾಗೂ ಹಿಂಸಾಚಾರ. ಅಂದರೆ ಶಿಶು ಮೃತ್ಯು ಪ್ರಮಾಣಕ್ಕಿಂತ ಹದಿಹರೆಯದ ಮೃತ್ಯು ಪ್ರಮಾಣ ಅಧಿಕ. UNICEF ಅಂಕಿ ಅಂಶಗಳ ಪ್ರಕಾರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹುಡುಗಿಯರು 18ವರ್ಷ ಅಥವ ಅದಕ್ಕಿಂತ ಮೊದಲೇ ವಿವಾಹವಾಗುತ್ತಿದ್ದಾರೆ. ಇದರಿಂದ ತಮ್ಮ 15 ರಿಂದ 19ನೇ ವಯಸ್ಸಿನೊಳಗೆ ಗರ್ಭ ಧರಿಸುತ್ತಾರೆ. ಅಪ್ರಾಪ್ತ ವಯಸ್ಸಿನಲ್ಲಿ ಗರ್ಭಧಾರಣೆ ಹಾಗೂ ಹೆರಿಗೆಗಳ ಸಮಸ್ಯೆಗಳಲ್ಲಿ ಸಿಲುಕಿ ಬಹುತೇಕರು ಅಸು ನೀಗುತ್ತಾರೆ. Lancet Study ಪ್ರಕಾರ 15ರಿಂದ 24ರ ವಯಸ್ಸಿನ ಅಂತರದಲ್ಲಿ ಸಾಯುವವರ ಪ್ರಮಾಣ 1ರಿಂದ 4ವರ್ಷಗಳ ಅಂತರದೊಳಗೆ ಸಾಯುವವರ ಪ್ರಮಾಣಕ್ಕಿಂತ ಮೂರು ಪಟ್ಟು ಅಧಿಕ! ಈ ಹಿನ್ನೆಲೆಯಲ್ಲಿ ನಮ್ಮ ದೇಶ ಕೂಡಾ ಎಚ್ಚೆತ್ತಿದೆ. ಸುಮಾರು 300 ಮಿಲಿಯನ್ ಹದಿಹರೆಯದವರ ಸಲುವಾಗಿ 3,000 Adolescent Friendly Health Clinicಗಳನ್ನು ಸ್ಥಾಪಿಸಿದೆ. ಗಾಬರಿ ತರುವ ವಿಚಾರವೆಂದರೆ ಹದಿವಯಸ್ಸಿನ 3ಕೋಟಿ ಹುಡುಗಿಯರು, 2ಕೋಟಿ ಹುಡುಗರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕಬ್ಬಿಣದ ಅಂಶ ಕಡಿಮೆಯಾಗಿರುವುದು ಇದಕ್ಕೆ ಕಾರಣ ಎಂದು ಸರ್ಕಾರ ಇದನ್ನೊಳಗೊಂಡ ಔಷಧಗಳನ್ನು ಈ ವಯೋಮಾನದವರಿಗೆ ತಲುಪಿಸಲು ಹರಸಾಹಸ ಮಾಡುತ್ತಿದೆ. ಇದಲ್ಲದೆ ಮಾದಕ ದ್ರವ್ಯ ಸೇವನೆ ಹಾಗೂ ಲೈಂಗಿಕ ರೋಗಗಳು ಈ ವಯೋಮಾನದವರನ್ನು ಕಾಡುತ್ತಿರುವ ಪ್ರಮುಖ ಪೀಡೆಗಳು. ಇದಕ್ಕೆ ಸಂಸ್ಕೃತಿಯ ಪರಿಚಯದ ಕೊರತೆ, ಸಂಸ್ಕಾರದ ಲೋಪಗಳು ಕಾರಣ. ಅಲ್ಲದೆ ಅಡೆತಡೆಯಿಲ್ಲದೇ ಬೆಳೆಯುತ್ತಿರುವ ಎಲೆಕ್ಟ್ರಾನಿಕ್ ಮಾಧ್ಯಮಗಳು ಪ್ರಸಾರ ಮಾಡುತ್ತಿರುವ ಎಗ್ಗಿಲ್ಲದ ಬೇಜವಾಬ್ದಾರಿಯುತ ಕಾರ್ಯಕ್ರಮಗಳು ಈ ಹದಿಹರೆಯದವರನ್ನು ದಾರಿ ತಪ್ಪಿಸುತ್ತಿವೆ. ಧೂಮಪಾನ, ಮದ್ಯಪಾನ, ಅನೈತಿಕ ಲೈಂಗಿಕ ಕ್ರಿಯೆ ತಪ್ಪೇ ಅಲ್ಲ ಅನ್ನುವ ಭಾವನೆಗಳನ್ನು ಮೂಡಿಸುತ್ತಿರುವ ಮಾಧ್ಯಮಗಳ ಪಾಲು ಹೆಚ್ಚಿದೆ ಅನ್ನುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಇಡೀ ಸಮಾಜ ಎಚ್ಚರಗೊಳ್ಳಬೇಕು. ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಈ ಯುವಶಕ್ತಿಯ ಸಂರಕ್ಷಣೆಯಾಗಬೇಕು, ಸದುಪಯೋಗವಾಗಬೇಕು. ಇಲ್ಲದಿದ್ದರೆ ಈ ಭೂಮಿಯಲ್ಲಿ ಕೇವಲ ಶಿಶುಗಳು ಮತ್ತು ಮುದುಕರು ಮಾತ್ರ ಉಳಿಯುತ್ತಾರೆ.

ಈಗಾಗಲೇ ಹತ್ತನೇ ತರಗತಿ ಹಾಗೂ ಹನ್ನೆರಡನೇ ತರಗತಿಗಳ ಫಲಿತಾಂಶ ಹೊರಬಿದ್ದಿದೆ. ನೂರಕ್ಕೆ ನೂರು ಅಂಕ ಪಡೆದವರಿಗೂ ಮುಂದಿನ ಭವಿಷ್ಯದ ಬಗ್ಗೆ ಆತಂಕ ಮೂಡುವಂತಹ ಪರಿಸ್ಥಿತಿ. ಏಕೆಂದರೆ ಕಾಲೇಜುಗಳ Cutoff ! ಅದೂ ಶೇಕಡಾ 90 ಅಂಕಗಳಿಗೆ! ಹಾಗಾದರೆ ಅದಕ್ಕಿಂತ ಕಡಿಮೆ ಅಂಕ ಪಡೆದವರ ಗತಿ? ಕಡಿಮೆ ಅಂಕ ಗಳಿಸಿದರೆ ಭವಿಷ್ಯವೇ ಇಲ್ಲವೇ? ಕಡಿಮೆ ಅಂಕ ಗಳಿಸಿದ ಮಾತ್ರಕ್ಕೆ ವಿದ್ಯಾರ್ಥಿ ಅತ್ಯಂತ ದಡ್ಡ ಎಂದಲ್ಲ. ಬಹುಶಃ ಪ್ರತಿಕೂಲ ವಾತಾವರಣ ವಿದ್ಯಾರ್ಥಿಯನ್ನು ವಿಮುಖವಾಗಿಸಿರಬಹುದು. ಈ ಬಗ್ಗೆ ಸರ್ಕಾರ ಹಾಗೂ ಇಡೀ ಸಮಾಜ ಗಂಭೀರ ಚಿಂತನೆ ನಡೆಸಬೇಕಿದೆ. ದೆಹಲಿಯಲ್ಲಿಯೇ ಹತ್ತನೇ ತರಗತಿಯಲ್ಲಿ ಶೇಕಡಾ 90 ಅಂಕ ಗಳಿಸಿದವರ ಸಂಖ್ಯೆ 30,000 ! ಎಲ್ಲ ಸೀಟುಗಳನ್ನು ಇವರೇ ಕಬಳಿಸಿದರೆ ಉಳಿದವರ ಭವಿಷ್ಯ ಕತ್ತಲಲ್ಲಿ ಮುಳುಗುತ್ತದೆ ; ಯೋಚನೆಗೆ, ಯೋಜನೆಗೆ ಇದು ಸಕಾಲ.

ಜೂನ್ 5ರಂದು ವಿಶ್ವ ಪರಿಸರ ದಿನ. ಇಡೀ ಬ್ರಹ್ಮಾಂಡದಲ್ಲಿ ಮನುಷ್ಯ ಜೀವಿಸಬಲ್ಲ ಏಕೈಕ ಸ್ಥಳ ಈ ಭೂಮಿ. ಮನುಷ್ಯನ ಲಾಲಸೆಗಳಿಂದ ಈ ಭೂಮಿ ಕ್ರಮೇಣ ಬಂಜರಾಗಿ ಜೀವಿಗಳು ಬದುಕದಿರುವ ದುಸ್ಥಿತಿ ದೂರವಿಲ್ಲ. ನಮ್ಮ ಕರ್ನಾಟಕವನ್ನೇ ನಿದರ್ಶನವಾಗಿ ಪರಿಗಣಿಸಿದರೆ ಲಭ್ಯ ವರದಿಯ ಪ್ರಕಾರ ಬೃಹತ್ ಪ್ರಮಾಣದ ಗಣಿಗಾರಿಕೆ ಹಸಿರು ತಾಣಗಳನ್ನು ವಿನಾಶಗೊಳಿಸುತ್ತಿವೆ. ಗಣಿಗಾರಿಕೆ ಜೊತೆ ಪ್ರಕೃತಿಯನ್ನು ಕಾಪಾಡಿಕೊಳ್ಳಬೇಕೆಂಬ ಕಾನೂನು ಇದ್ದರೂ ಒಟ್ಟು 49 ಗಣಿ ಕಂಪನಿಗಳ ಪೈಕಿ ನಿಯಾಮಾನುಸಾರ ಅನುಷ್ಠಾನಗೊಳಿಸುತ್ತಿರುವ ಕಂಪನಿಗಳು ಕೇವಲ 12 ಮಾತ್ರ. ಸುಪ್ರೀಂಕೋರ್ಟಿನ ಆದೇಶವನ್ನು ಗಾಳಿಗೆ ತೂರುವ ಲಾಲಸೆಗೆ ಕೊನೆ ಹೇಳಲೇಬೇಕು. ಜನರ ದನಿ ಸರ್ಕಾರವನ್ನು, ನ್ಯಾಯಾಲಯಗಳನ್ನು ಎಚ್ಚರಿಸಬೇಕು. ಆಗ ಈ ಭೂಮಿ ಉಳಿಯುತ್ತದೆ, ಭವಿಷ್ಯದ ಸಂತಾನವನ್ನು ಸಂರಕ್ಷಿಸುತ್ತದೆ. ಇದು ಕ್ಷಿಪ್ರಗತಿಯಲ್ಲಿ ಆಗಲಿ ಎಂಬುದು ನಮ್ಮ ಕಳಕಳಿಯ ಬಯಕೆ.

❑ ಉಷಾ ಭರತಾದ್ರಿ

ಅಂತರಾಳದಿಂದ...

# ಭಾರತೀಯ ಕನ್ನಡತಿ

ಸಾವಿತ್ರಿ ಶಾಸ್ತ್ರಿಯವರ ಕುರಿತಾಗಿ ಈ ಬಾರಿಯ ಅಭಿಮತದಲ್ಲಿ ವಿಸ್ತೃತವಾದ ಲೇಖನವಿದೆ. ಅವರ ಬಗ್ಗೆ ಕೆಲ ವರ್ಷಗಳ ಹಿಂದೆ ಪುಟ್ಟ ಲೇಖನವೊಂದನ್ನು ಬರೆದ ನೆನಪು ಇದೆ. ಈ ಬಾರಿಯ ಅಂತರಾಳದಲ್ಲಿ ಅವರ ಬಗ್ಗೆ ನಾಲ್ಕು ಸಾಲು ಬರೆಯುವ ಆಸೆ. ದೆಹಲಿಯಲ್ಲಿ ದೆಹಲಿ ಕನ್ನಡಿಗರಾಗಿ ಉಳಿದು ಬಿಡುವವರ ಸಂಖ್ಯೆ ತೀರಾ ಕಡಿಮೆ ಬಹುಶಃ ಬೆರಳೆಣಿಕೆಯಲ್ಲಿ ಲೆಕ್ಕ ಮಾಡಿ ಬಿಡಬಹುದು. "ಸಾಕಪ್ಪ, ಇನ್ನು ಊರಿನತ್ತ ಮರಳುವ" ಎನ್ನುವ ಭಾವದಲ್ಲಿ ಇರುವವರೇ ಹೆಚ್ಚು. ಇವತ್ತಲ್ಲದಿದ್ದರೆ, ಇನ್ನೊಂದು ದಿನ ಕರ್ನಾಟಕದತ್ತ ಮುಖ ಮಾಡುವವರೇ ಹೆಚ್ಚು. ಒಂದು ಕಾಲು ದೆಹಲಿಯಲ್ಲಿ, ಇನ್ನೊಂದು ಕಾಲು ಊರಿನಲ್ಲಿ. ಈ ಬಗೆಯ ದಂದ್ವದಲ್ಲೇ ನಾವೆಲ್ಲ ತೊಳಲುತ್ತಿರುವವರು. ಈ ಬಗೆಯ ದ್ವಂದ್ವ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರಿಗಿಲ್ಲ. ದೆಹಲಿಯೇ ಅವರಿಗೆ ಮನೆ. ಆದರೆ, ಕನ್ನಡದ ತಂಗಾಳಿ ಅವರ ಸುಜಾನ್‌ಸಿಂಗ್ ಪಾರ್ಕಿನ ಅತ್ಯಂತ ವಿಶಾಲವಾದ ನಾಲ್ಕನೇಯ ಮಹಡಿಯ ಮನೆಯಲ್ಲಿ ಸದಾ ಸೂಸುತ್ತಿರುತ್ತದೆ. ಹಿಂದಿ-ಕನ್ನಡಗಳಲ್ಲಿ ಲೀಲಾಜಾಲವಾಗಿ ಅವರು ಈಜಾಡುತ್ತಾರೆ.

ಸುಮಾರು ಆರೇಳು ದಶಕಗಳ ಹಿಂದೆ ದಿವಂಗತ ಶ್ರೀ ಗೋಪಾಲಶಾಸ್ತ್ರಿಯವರ ಬಾಳಸಂಗಾತಿಯಾಗಿ ಉತ್ತರ ಭಾರತದ ಬೆನ್ನು ಹತ್ತಿದ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರದ್ದು ಅಸಾಮಾನ್ಯವಾದ ಬದುಕು. ಒಂದು ಮಣ್ಣಿನಲ್ಲಿ ಬೇರು ಬಿಟ್ಟವರನ್ನು ಹೊರತೆಗೆದು ಇನ್ನೊಂದು ಮಣ್ಣಿನಲ್ಲಿ ನೆಟ್ಟ ಪರಿ ಅವರದ್ದು. ಶ್ರೀ ಗೋಪಾಲ ಶಾಸ್ತ್ರಿಯವರಿಗೆ ಈ ಬಗೆಯ ಬದುಕಿನ ಬೇರಿನ ಸಮಸ್ಯೆಗಳು ಕಾಡಿರಲಿಕ್ಕಿಲ್ಲ. ನಾವು ಅಭಿಮತದಲ್ಲೇ ಹಿಂದೆ ನಮೂದಿಸಿದಂತೆ ಶ್ರೀ ಗೋಪಾಲ ಶಾಸ್ತ್ರಿಯವರು ಹುಟ್ಟಿ ಬೆಳೆದಿದ್ದು ಬಿಹಾರದಲ್ಲಿ. ನಂತರದಲ್ಲಿ ದೆಹಲಿಯಲ್ಲಿ . . .ಒಟ್ಟಾರೆ ಉತ್ತರ ಭಾರತದಲ್ಲಿ. ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಹಾಗೂ ನಂತರದ ದಶಕಗಳಲ್ಲಿ ಶ್ರೀ ಗೋಪಾಲ ಶಾಸ್ತ್ರಿಯವರು ಚುರುಕಾಗಿ ಕೆಲಸ ಮಾಡಿದವರು. ಅವರು ಅಪ್ಪಟ ಬಿಹಾರಿಗಳಾಗಿದ್ದರು. ಆದರೆ, ನೂರಾರು ವರ್ಷಗಳ ಹಿಂದೆ ಬಿಹಾರಿನ ಗಯಾಕ್ಕೆ ಬಂದ ಅವರ ಪೂರ್ವಜರು ಕನ್ನಡವನ್ನು ಬಿಡಲಿಲ್ಲ. ಬಾಳಸಂಗಾತಿಯನ್ನು ಅರಸುತ್ತ ಶಾಸ್ತ್ರಿಯವರ ಕುಟುಂಬದವರು ಮತ್ತೆ ಮತ್ತೆ ಕರ್ನಾಟಕದತ್ತಲೇ ಮುಖಮಾಡಿದ್ದು ಇನ್ನೊಂದು ಚಾರಿತ್ರಿಕ ದಾಖಲೆ.

ನಾವೆಲ್ಲ ಮಹಿಳಾ ಹಕ್ಕು ಹಾಗೂ ಸ್ವಾತಂತ್ರ್ಯಗಳ ಬಗ್ಗೆ ಮಾತನಾಡುತ್ತೇವೆ. ನಮ್ಮ ದೇಶದ ರಾಜಕೀಯ ಹಾಗೂ ಸಾಂಸ್ಕೃತಿಕ ಬದುಕಿನ ಎಲ್ಲ ಸ್ತರಗಳಲ್ಲೂ ಮಹಿಳೆಯರಿಗೆ ಸ್ಥಾನವಿರಬೇಕೆಂಬ ಬಗ್ಗೆ ದೊಡ್ಡದಾಗಿ ಮಾತನಾಡುತ್ತೇವೆ. ಆದರೆ, ಮೂಲಭೂತವಾಗಿ ಮಹಿಳೆಯರಿಗೆ ಅವರ ಬದುಕಿನ ವಿವರಗಳನ್ನು ಎಲ್ಲ ಪ್ರಮಾಣದಲ್ಲೂ ರೂಪಿಸಿಕೊಳ್ಳುವ ಸಾಧ್ಯತೆಗಳೇ ಕಡಿಮೆ. ನಮ್ಮ ಭಾರತೀಯ ಸಂಪ್ರದಾಯದಲ್ಲಿ ಮದುವೆ ಎಂದಾದ ಮೇಲೆ ಹೆಣ್ಣುಮಕ್ಕಳ ಬದುಕಿನ ದಿಕ್ಕೇ ಬದಲಾಗಿ ಹೋಗುತ್ತದೆ. ಈಗೀಗ ಈ ಬಗೆಯ ದಿಕ್ಕು ಬದಲಾಗುವ ಕಾರ್ಯಕಲಾಪಗಳು ಕಡಿಮೆಯಾಗುತ್ತಿವೆ. ಆದರೂ, ನಾವು ಇನ್ನೂ ಬದಲಾವಣೆಯ ಗಾಳಿಯಲ್ಲೇ ಸಿಲುಕಿಕೊಂಡಿದ್ದೇವೆ. ಈ ಬದಲಾವಣೆಯ ಗಾಳಿಯಲ್ಲಿ ಶ್ರೀಮತಿ ಶಾಸ್ತ್ರಿಯವರು ನಾಲ್ಕಾರು ದಶಕಗಳ ಹಿಂದೆಯೇ ಸಿಲುಕಿಕೊಂಡಿದ್ದರು. ಶ್ರೀ ಗೋಪಾಲಶಾಸ್ತ್ರಿಯವರ ಮೇಲೆ ಗಾಂಧೀಜಿಯವರ ಹಾಗೂ ಇತರ ಸ್ವಾತಂತ್ರ್ಯ ಸಂಗ್ರಾಮದ ನೇತಾರರ ಪ್ರಭಾವವೋ ಏನೋ? ಒಟ್ಟಾರೆ ಬದಲಾವಣೆಯ ಗಾಳಿ, ಹೊಸ ವಿಚಾರಗಳ ಗಾಳಿ ಅವರನ್ನು ಆವರಿಸಿತ್ತು. ಗಾಂಧೀ. . .ಚಳುವಳಿ. . . ಅದು ಇದೂ ಅಂತ, ಖಾದಿ ಸೀರೆಯನ್ನು, ಖಾದಿ ಬಟ್ಟೆಗಳನ್ನು ಉಟ್ಟುಕೊಳ್ಳುವ ಹುನ್ನಾರ. . .ನೂರಾರು ರಾಜಕೀಯ ನೇತಾರರು ಅವರ ಮನೆಗೆ ಎಡತಾಕುವ ಪರಿ. . .ಎಲ್ಲ ಶ್ರೀಮತಿ ಶಾಸ್ತ್ರಿಯವರ ಬದುಕಿನ ಅಂಗವಾಗಿ ಹೋಗಿತ್ತು.

ಅವರ ಸುಜಾನ್‌ಸಿಂಗ್ ಪಾರ್ಕಿನ ಬಹು ಅಂತಸ್ತಿನ ಮನೆಯೆಂದರೆ ಸಾಮಾನ್ಯವೇ? ಇದು ದೆಹಲಿಯ, ಅದರಲ್ಲೂ ನವದೆಹಲಿಯ ಹೃದಯ ಭಾಗದಲ್ಲಿದೆ. ಅವರ ಮನೆಯ ಮೇಲಿಂದ ಸ್ವಲ್ಪ ಕಾಲೆತ್ತರಿಸಿ ನೋಡಿದರೆ ನಿಮಗೆ ರಾಷ್ಟ್ರಪತಿ ಭವನ, ಇಂಡಿಯಾಗೇಟ್ ಕಾಣಬಹುದು. ಆಗಿನ ಎಲ್ಲ ರಾಜಕೀಯ ಓಡಾಟಗಳ ನಡುವೆ ದಿವಂಗತ ಗೋಪಾಲಶಾಸ್ತ್ರಿಯವರು ಈ ಮನೆಯೊಂದನ್ನು ಮಾಡಿಕೊಂಡದ್ದು ವಿಶಿಷ್ಟವಾದದ್ದು. ಸುಮಾರು ಐದಾರು ದಶಕಗಳ ಹಿಂದೆ, ಅಂದರೆ ಸ್ವಾತಂತ್ರ್ಯ ಬಂದ ಹೊಸತರಲ್ಲಿ ಅಲ್ಲೆಲ್ಲಾ ಅಷ್ಟಷ್ಟು ಮನೆಮಠಗಳು ಸಿಗುತ್ತಿದ್ದವು. ದಿವಂಗತ ಶಾಸ್ತ್ರಿಯವರಿಗೆ ಆಗಿದ್ದ ರಾಜಕೀಯ ಶಕ್ತಿಯನ್ನೇ ಗಣನೆಗೆ ತೆಗೆದುಕೊಂಡರೆ ಅವರು ದೆಹಲಿಯ ಪ್ರತಿಷ್ಠಿತ ಜಾಗೆಯಲ್ಲಿ ದೊಡ್ಡ ಬಂಗ್ಲೆಯನ್ನು ಮಾಡಿಕೊಂಡು ಇರಬೇಕಾಗಿತ್ತು. ಆದರೆ, ವಿಶಾಲವಾದ ಈ ಸುಂದರ ಸುಜಾನ್‌ಸಿಂಗ್ ಪಾರ್ಕಿನ ಫ್ಲಾಟಿನಲ್ಲೇ ತಳವೂರಿದರು. ಅದು ಅವರಿಗೆ ಸಿಕ್ಕ ಬಗ್ಗೆಯೂ ಒಂದು ಕತೆಯಿದೆ. ಈ ಕತೆಯನ್ನು ಸಾವಿತ್ರಿ ಶಾಸ್ತ್ರಿಯವರ ಬಾಯಿಯಿಂದಲೇ ಕೇಳಬೇಕು. ಮಾತುಕತೆ, ಹರಟೆಯೊಂದರೆ ಅವರಿಗೆ ಸಂತಸ. ಅವರ ಬಳಿ ನೀವು ಕುಳಿತರೆ ವೇಳೆಯ ಅರಿವೇ ಆಗುವುದಿಲ್ಲ, ಒಂದೊಂದಾಗಿ ನೆನಪಿನ ಬುತ್ತಿ ಬಿಚ್ಚುತ್ತದೆ. ಈಗಲೂ ಅದೇ ದೊಡ್ಡ ದನಿಯಲ್ಲಿ ಮಾತನಾಡುತ್ತಾರೆ. ಮೊಮ್ಮಕ್ಕಳನ್ನು, ಒಮ್ಮೊಮ್ಮೆ ನಮ್ಮೆಲ್ಲರನ್ನೂ ಸಹ ದೊಡ್ಡ ದನಿಯಲ್ಲೇ ಪ್ರೀತಿಯಿಂದ ಗದರುತ್ತಾರೆ. ಕೆಲವರು ಗದರಿದರೆ ತುಂಬಾ ಚೆನ್ನಾಗಿರುತ್ತದೆ, ಇನ್ನೂ ಸ್ವಲ್ಪ ಗದರಲಿ ಎಂದು ಅನಿಸುವ ಹಾಗೆ ಇರುತ್ತದೆ. ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರದ್ದು ಆ ಪರಿ. "ಹಾಗೆ ಮಾಡಿ, ಹೀಗೆ ಮಾಡಿ, ದೆಹಲಿ ಕನ್ನಡ ಶಾಲೆಯ ಮಕ್ಕಳಿಗೆ ಶಿಸ್ತು ಕಲಿಸಿ. . .ಹಾಗಾಗಬೇಕಾಗಿತ್ತು. . .ಹೀಗಾಗಬೇಕಿತ್ತು. . .ಒಂದೇ ಎರಡೇ. . . .ಅವರಿಗೆ ಬಿಡುವಿಲ್ಲದ ಕೆಲಸ, ಆತಂಕ, ಗಡಿಬಿಡಿ. . . .

ದಿವಂಗತ ಗೋಪಾಲ ಶಾಸ್ತ್ರಿಯವರು ಗತಿಸಿದ ನಂತರ ಅವರ ಜಾಗೆಯನ್ನು ಶ್ರೀಮತಿ ಶಾಸ್ತ್ರಿಯವರು ದೆಹಲಿ ಕನ್ನಡದ ಬಳಗದಲ್ಲಿ ಸದ್ದಿಲ್ಲದೆ ಆಕ್ರಮಿಸಿಕೊಂಡಿದ್ದಾರೆ. ನಾವೆಲ್ಲ ಆಶಿಸುವ ಹಾಗೂ ಬಯಸುವ ಈ ಪ್ರೀತಿಯ "ಆಕ್ರಮಣ" ಶ್ರೀಮತಿ ಶಾಸ್ತ್ರಿಯವರಿಗೆ ವಿಶಿಷ್ಟವಾದದ್ದು. ಐದಾರು ದಶಕಗಳಿಂದ ದೆಹಲಿಯಲ್ಲಿ ಕನ್ನಡದ ಎರಡು ಸಂಸ್ಥೆಗಳು–ಕನ್ನಡ ಶಾಲೆ ಹಾಗೂ ಕನ್ನಡ–ಸಂಘ–ಬೆಳೆದು ಬಂದ ರೀತಿಯನ್ನು ಕಂಡವರು ಅವರು. ದೆಹಲಿ ಕನ್ನಡ ಶಾಲೆಗೆ ಐದು ದಶಕಗಳ ಹಿಂದೆ ಬಿದ್ದ ತಳಪಾಯದ ಮಣ್ಣಿನ ಕಣವನ್ನು ಕಂಡವರು ಅವರು. ಅಷ್ಟೇ ಅಲ್ಲ ಅವರ ಮಕ್ಕಳು ಹಾಗೂ ಮೊಮ್ಮಕ್ಕಳು ಇದೇ ಕನ್ನಡ ಶಾಲೆಯಲ್ಲೇ ಓದಿ ಬೆಳೆದವರು. ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರು ಬರೀ ಆಡಲಿಲ್ಲ, ಆಡಿದಂತೆ ಮಾಡಿ ತೋರಿಸಿದರು. ಅದಕ್ಕಾಗಿಯೇ ಅವರಿಗೆ ಈ ಎಲ್ಲ ಕನ್ನಡದ ಕಳಕಳಿಗಳು ಅವರ ಮನದ ತುಂಬ ತುಂಬಿವೆ. ಒಂದು ಬಗೆಯಲ್ಲಿ ಹಾಗೂ ನಿಜವಾದ ಅರ್ಥದಲ್ಲಿ ಅವರು "ಭಾರತೀಯ ಕನ್ನಡಿಗರು". ಕುವೆಂಪುರವರ "ಭಾರತ ಜನನಿಯ ತನುಜಾತೆ" ಗೀತೆಯ ಅರ್ಥವಂತಿಕೆ ಶ್ರೀಮತಿ ಸಾವಿತ್ರಿ ಶಾಸ್ತ್ರಿಯವರ ಬದುಕಿಗೂ ಅನ್ವಯಿಸುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು.

❑ ಡಾ. ವೆಂಕಟಾಚಲ ಹೆಗಡೆ

## ಮುನ್ನೋಟ

ದೆಹಲಿಗೆ ಹತ್ತು ಹಲವು ಕಾರ್ಯಕ್ರಮದ ನಿಮಿತ್ತ ವಿವಿಧೆಡೆಗಳಿಂದ ಕನ್ನಡಿಗರು ಬರುತ್ತಿರುತ್ತಾರೆ. ನಮ್ಮವರಿಗೆ ನಗರದಲ್ಲಿ ವಸತಿ ವ್ಯವಸ್ಥೆ ತುಂಬಾ ಕಷ್ಟಕರ. ಸಂಘಕ್ಕೆ ಪ್ರತಿನಿತ್ಯ ನೂರಾರು ಕರೆಗಳು ಬರುತ್ತಿರುತ್ತವೆ. ಆದರೆ ಅವರ ಬೇಕುಗಳನ್ನು ಪೂರೈಸುವುದು ಅಸಾಧ್ಯ. ಸಾಂಸ್ಕೃತಿಕ–ಸಾಹಿತ್ಯಿಕ ಕಾರ್ಯಕ್ರಮಗಳಿಗಾಗಿ ಬರುವ ಸಾಹಿತಿ–ಕಲಾವಿದರಿಗೆ ವಸತಿ ಕಲ್ಪಿಸುವುದೂ ಕೆಲವೊಮ್ಮೆ ಸಾಧ್ಯವಾಗುತ್ತಿಲ್ಲ. ಇದೀಗ ಸಂಘದಲ್ಲಿ ನಾಲ್ಕು ಚಿಕ್ಕ ಕೊಠಡಿಗಳನ್ನು ನವೀಕರಿಸಿ ವಿಶಾಲಗೊಳಿಸಲಾಗಿದೆ ಹಾಗೂ ಮೂರು ಹೊಸ ಕೊಠಡಿಗಳು ಸಜ್ಜಾಗಿದ್ದು, ಆದಷ್ಟು ಬೇಗ ಉದ್ಘಾಟನೆಗೊಳ್ಳಲಿದೆ. ಬೇಸಿಗೆ ರಜಾ ದಿನಗಳು ಕಳೆದ ಕೂಡಲೇ ಸಂಘದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಎಂದಿನಂತೆ ಆರಂಭವಾಗಲಿದೆ.

❑ ಸಿ.ಎಂ. ನಾಗರಾಜ

# “ಪೋಷಕರಿಗೊಂದು ಕಿವಿಮಾತು”

ಎಲ್ಲ ತಂದೆ-ತಾಯಿ ಪೋಷಕರಿಗೆ ಚಿಂತೆಯೊಂದೇ ಏನಪ್ಪಾ ಅಂದರೆ, ಅವರ ಎಲ್ಲ ಮಕ್ಕಳು ಕಡಿಮೆ ಅಂದರೆ 98% ಅಂಕಗಳನ್ನು ಎಲ್ಲ ವಿಷಯಗಳಲ್ಲಿ ಪಡೆಯಬೇಕು-ಅವರ ಮಕ್ಕಳೇ ಶಾಲೆಗೆ ಮೊದಲ ಸ್ಥಾನದಲ್ಲಿರಬೇಕು ಅಂತ. ಹೌದು ನಿಜ ಕೂಡ. ಎಲ್ಲ ಮನುಷ್ಯನಿಗೂ ಈ ರೀತಿ ಅನಿಸುವುದು ಸಹಜ. ಆದರೆ ಇದು ಎಷ್ಟರಮಟ್ಟಿಗೆ ಸಾಧ್ಯ? ಇಂದು ನಾವೆಲ್ಲ ಓದಿ ಮುಂದೆ ಬಂದಿರುವವರೇ ಹೌದು. ಹಾಗೇನೇ ನಾವು ಓದುತ್ತಿರುವಾಗ ಎಷ್ಟು ಜನ ವಿದ್ಯಾರ್ಥಿಗಳು ಪ್ರತಿಶತ 98 ಅಂಕಗಳನ್ನು ಪಡೆಯುತ್ತಿದ್ದರು ಮತ್ತು ಬೇರೆಯವರು ಎಷ್ಟು ಅಂಕಗಳನ್ನು ಪಡೆದರು. ಅದರಲ್ಲಿ ನಮ್ಮ ಅಂಕಗಳು ಎಷ್ಟಿದ್ದವು? ನಮ್ಮ ತಂದೆ-ತಾಯಿಗಳು ಸಹ ಅದನ್ನೇ ಬಯಸುತ್ತಿದ್ದರಲ್ಲವೇ ಅನ್ನುವುದನ್ನು ನಾವಿಂದು ಮರೆತು, ನಮ್ಮ ಮಕ್ಕಳ ಮೇಲೆ ಎಷ್ಟೊಂದು ಒತ್ತಡ ಹೇರುತ್ತಿದ್ದೇವೆ ಅನ್ನೋದನ್ನು ಬೇರೆ ಯಾರಿಗೂ ಹೇಳದೆ ನಮ್ಮಷ್ಟಕ್ಕೆ ನಾವೇ ಯೋಚಿಸಬೇಕು.

ಈಗ ನನ್ನ 20 ವರ್ಷಗಳ ಶಿಕ್ಷಣ ಕ್ಷೇತ್ರದ ಅನುಭವದ ಪ್ರಕಾರ ಕೇವಲ 10 ಪ್ರತಿಶತ ವಿದ್ಯಾರ್ಥಿಗಳು 90 ಅಂಕಗಳ ಮೇಲೆ ಪಡೆದಿರುತ್ತಾರೆ, 20 ಪ್ರತಿಶತ ಮಕ್ಕಳು 70ರಿಂದ 90ರ ಮಧ್ಯೆ ಇರ್ತಾರೆ, ಇನ್ನು 20 ಪ್ರತಿಶತ ಮಕ್ಕಳು 60 ರಿಂದ 70 ಪ್ರತಿಶತ ಅಂಕ ಗಳಿಸಿದರೆ ಇನ್ನುಳಿದ 50 ಪ್ರತಿಶತ ಮಕ್ಕಳು 50 ಅಂಕಗಳನ್ನು ಗಳಿಸುವಲ್ಲಿ ಮಾತ್ರ ಯಶಸ್ವಿಯಾಗುತ್ತಾರೆ. ಹೀಗಿದ್ದಾಗ ಎಲ್ಲ ಮಕ್ಕಳು 90 ಪ್ರತಿಶತ ಅಂಕಗಳನ್ನು ಗಳಿಸಲಿಕ್ಕೆ ಹೇಗೆ ಸಾಧ್ಯ? ಎಂಬುದು ಯೋಚಿಸಬೇಕಾದ ವಿಷಯ.

ಇತ್ತೀಚೆಗೆ ಪರಿಸ್ಥಿತಿ ಹೇಗಾಗಿದೆ ಎಂದರೆ ತಂದೆ-ತಾಯಂದಿರ ಅತೀವ ಒತ್ತಡದಿಂದಾಗಿ ಅನೇಕ ಮಕ್ಕಳು ಅನಾಹುತ ಮಾಡಿಕೊಳ್ಳುತ್ತಿದ್ದಾರೆ. ಎಲ್ಲ ತಂದೆ-ತಾಯಿ, ಪೋಷಕರಿಗೆ ಮಕ್ಕಳು ಸದಾ ಓದಿನಲ್ಲಿ ಮುಂದಿರಬೇಕೆಂದು ಬಯಸುವವರೇ ಆದರೆ ತಂದೆ-ತಾಯಿಗಳು ಯಾವತ್ತಾದರೂ ಮಕ್ಕಳಿಗೆ ವಿದ್ಯಾಭ್ಯಾಸ ಹೇಳಿಕೊಡುತ್ತಿರುವ ಶಾಲೆ ಹೇಗಿದೆ, ಅವರು ಏನು ಹೇಳಿಕೊಡುತ್ತಿದ್ದಾರೆ, ಮಕ್ಕಳಿಗೆ ಅದು ತಿಳಿಯುತ್ತಿದೆಯೇ ಎಂದು ಯೋಚಿಸುವವರಾರು ಇಲ್ಲ, ಏಕೆಂದರೆ ಯಾರೊಬ್ಬರ ಹತ್ತಿರವೂ ಸಮಯವೇ ಇಲ್ಲ. ಮಕ್ಕಳು ಏನನ್ನಾದರೂ ಕೇಳಿದರೆ, ಸಮರ್ಪಕವಾದ ಉತ್ತರ ನೀಡುವಲ್ಲಿ ವಿಫಲರಾಗುತ್ತಾರೆ. ಕಾರಣ ಇದು ಪೋಷಕರ ಮೇಲಿರುವ ಒತ್ತಡ. ಈ ಎಲ್ಲ ಕೆಲಸ ಹಾಗೂ ಜೀವನದ ಅನೇಕ ರೀತಿಯ ಒತ್ತಡಗಳಿಂದಾಗಿ ಮಕ್ಕಳ ಮೇಲೆ ಒತ್ತಡ ಹಾಕಲು ಪ್ರಯತ್ನಿಸಬೇಡಿ ಎನ್ನುವುದು ಎಲ್ಲ ಪೋಷಕರಲ್ಲಿ ಕಳಕಳಿಯ ಮನವಿ.

ಇನ್ನು ಈಗ 10ನೇ ತರಗತಿ ಹಾಗೂ 12ನೇ ತರಗತಿಯ ಪರೀಕ್ಷಾ ಫಲಿತಾಂಶ ಬರುತ್ತಿರುವ ಸಮಯ. ಹಾಗಾಗಿ ನೀವು ನಿಮ್ಮ ಮಕ್ಕಳ ಕ್ಷಮತೆಗೆ ಅನುಸಾರವಾಗಿ ಹಾಗೂ ಅವರ ಇಷ್ಟದಂತೆ ಉನ್ನತ ವ್ಯಾಸಂಗಕ್ಕಾಗಿ ಕಳುಹಿಸಿ. ಮಕ್ಕಳಿಗೆ 8ನೇ ತರಗತಿಯಿಂದಲೇ ಏನು ಓದಿದರೆ ಏನನ್ನು ಮಾಡಬಹುದು, ಯಾವ ಮಾರ್ಗ ಆಯ್ದುಕೊಳ್ಳಬಹುದು ಎಂಬುದನ್ನು ತಿಳಿಸುತ್ತ ಬನ್ನಿ. ಅಷ್ಟಕ್ಕೂ ಮಕ್ಕಳು 10ನೇ ತರಗತಿಯಲ್ಲಿರಬೇಕಾದರೆ ಅವರ ಫಲಿತಾಂಶ ನೋಡಿ ಮುಂದಿನ ವಿದ್ಯಾಭ್ಯಾಸದ ನಿರ್ಣಯ ಮಾಡಿ. ಈಗ ಕಾಲ ಬದಲಾಗಿದೆ, ಇಂದಿನ ದಿನಗಳಲ್ಲಿ ಕೇವಲ ಇಂಜಿನಿಯರ್, ಡಾಕ್ಟರ್‌ಗೇನೇ ಕೆಲಸ ಸಿಗುತ್ತೆ, ಸಂಬಳ ಹೆಚ್ಚಿರುತ್ತೆ ಅಂತ ಏನಿಲ್ಲ, ಸಾಕಷ್ಟು ಬೇರೆ ಬೇರೆ ಉದ್ಯೋಗಗಳ ಸೃಷ್ಟಿಯಾಗಿರುವುದರಿಂದ ಒಳ್ಳೆಯ ಕೆಲಸ, ಸಂಬಳ ಬೇರೆ ಮಕ್ಕಳಿಗೂ ದೊರೆಯುತ್ತಲಿದೆ. ಹಾಗಾಗಿ ಮಕ್ಕಳ ಮೇಲೆ ಒತ್ತಡ ಹೇರಿ ಅವರಿಗೆ ದಿಕ್ಕು ತೋಚದಂತೆ ಮಾಡಬೇಡಿ.

ಮಕ್ಕಳು ನಿಜವಾಗಲೂ 90 ಪ್ರತಿಶತಕ್ಕಿಂತ ಹೆಚ್ಚಿನ ಅಂಕ ಪಡೆಯಬೇಕೆಂದರೆ ತಂದೆ-ತಾಯಿ ಪೋಷಕರ ಪಾತ್ರ ಅತೀ ಮಹತ್ವವಾದದ್ದು. ನೀವು ಮಕ್ಕಳಿಗೆ ಸಮಯ ನೀಡಿ 1ನೇ ತರಗತಿಯಿಂದಲೇ ಮನೆಯಲ್ಲಿ ಪಾಠ ಮಾಡಿ, ತಿಳಿಸಿ ಹೇಳಿ ಒಳ್ಳೆಯ ಸಂಸ್ಕಾರ ನೀಡಿದಲ್ಲಿ ಖಂಡಿತ ಮಕ್ಕಳು ಆ ರೀತಿ ಜೀವನದಲ್ಲಿ ಮುಂದೆ ಬರುತ್ತಾರೆ. ಆದರೆ ಇನ್ನು ಕಡಿಮೆ ಅಂಕ ಪಡೆದ ಮಕ್ಕಳನ್ನು ಪ್ರೋತ್ಸಾಹಿಸಿ ಬುದ್ಧಿವಾದ ಹೇಳಿ ಅವರ ಸಾಮರ್ಥ್ಯಕ್ಕೆ ತಕ್ಕಂತೆ ಅವರಿಗೆ ವಿದ್ಯಾಭ್ಯಾಸ ನೀಡಿದಲ್ಲಿ ಅವರು ಸಹ ಜೀವನದಲ್ಲಿ ಸಾಕಷ್ಟು ಮುಂದೆ ಬರಲು ಅನೇಕ ಅವಕಾಶಗಳಿವೆ. ಮರೆಯದಿರಿ.

❑ ಭಂಡಾರಕರ್ ಎಸ್.ಎಲ್.

## ಅಭಿನಂದನೆ



ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶಿರೀಷ ಇನಾಮದಾರ್ ಮತ್ತು ಸವಿತಾ ಇನಾಮದಾರರ ಪುತ್ರಿ ಕು. ಸುರಭಿ ಇನಾಮದಾರ್ ಇತ್ತೀಚೆಗೆ ನಡೆದ 12 ತರಗತಿಯ ಸಿ.ಬಿ.ಎಸ್.ಸಿ ಬೋರ್ಡ್ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಶೇ. 91.4 ಅಂಕಗಳನ್ನು ಪಡೆದಿದ್ದಾಳೆ. ಗಣಿತದಲ್ಲಿ 95, ರಸಾಯನಶಾಸ್ತ್ರದಲ್ಲಿ 90, ಭೌತಶಾಸ್ತ್ರದಲ್ಲಿ 84, ಇಂಗ್ಲಿಷ್‌ನಲ್ಲಿ 95 ಹಾಗೂ ಗೃಹವಿಜ್ಞಾನದಲ್ಲಿ 94 ಅಂಕಗಳನ್ನು ಪಡೆದಿದ್ದಾಳೆ. ಹೊಸ ದೆಹಲಿಯ ಸೇಂಟ್ ಮಾರ್ಕ್ಸ್ ಸೀನಿಯರ್ ಸೆಕೆಂಡರಿ ಪಬ್ಲಿಕ್ ಸ್ಕೂಲಿನಲ್ಲಿ ಕಲಿಯುತ್ತಿದ್ದು ಗೃಹವಿಜ್ಞಾನ ವಿಷಯದಲ್ಲಿ ಶಾಲೆಗೆ ಪ್ರಥಮ ಬಂದಿದ್ದಾಳೆ. ಶಾಲೆಯ ಇತರ ಚಟುವಟಿಕೆಗಳ ಜೊತೆಗೆ ಶಾಲೆಯ ಪತ್ರಿಕೆಯ ಸಹ ಸಂಪಾದಕಳಾಗಿ 3 ವರ್ಷಗಳವರೆಗೆ ಕೆಲಸ ಮಾಡಿದ್ದಾಳೆ. ನೃತ್ಯ, ಹಾಡು ಮತ್ತು ಚಿತ್ರಕಲೆಯಲ್ಲಿ ಅಭಿರುಚಿಯನ್ನು ಹೊಂದಿದ್ದು ಅನೇಕ ಬಹುಮಾನಗಳನ್ನು ಪಡೆದಿದ್ದಾಳೆ.

**ಕು. ಸುರಭಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು ಹಾಗೂ ಜೀವನದಲ್ಲಿ ಇದೇ ರೀತಿ ಯಶಸ್ಸು ದೊರೆಯುತ್ತಲಿರಲೆಂದು ಹಾರೈಸುತ್ತೇವೆ.**

## ಕ್ರಿಕೆಟ್ ತರಬೇತುದಾರ ಎಂ. ಶಿವರಾಮ ರೈ ಸಾಧನೆಗೆ ಇನ್ನೊಂದು ಗರಿ



ದೆಹಲಿಯ ಆರ್.ಕೆ. ಪುರಂನ ದೆಹಲಿ ಪಬ್ಲಿಕ್ ಸ್ಕೂಲ್‌ನಲ್ಲಿ ದೈಹಿಕ ಶಿಕ್ಷಕರಾಗಿರುವ ಕ್ರಿಕೆಟ್ ತರಬೇತುದಾರ, ಮಾಜಿ ರಣಜಿ ಆಟಗಾರ, ಕನ್ನಡಿಗ ಎಂ. ಶಿವರಾಮ ರೈ ಸಾಧನೆಗೆ ಇನ್ನೊಂದು ಗರಿ ಮೂಡಿದೆ. ದೆಹಲಿಯ 16ರ ಕೆಳ ಹರೆಯದ ತರಬೇತುದಾರರಾಗಿ ಹಿಂದೆ ಎರಡು ಬಾರಿ ದೆಹಲಿಗೆ ವಿಜಯ ಮರ್ಚಂಟ್ ಟ್ರೋಫಿ ಗಳಿಸಿಕೊಟ್ಟ ರೈಯವರು ಇದೀಗ ಇನ್ನೊಂದು ಸಾಧನೆ ಮಾಡಿದ್ದಾರೆ.

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ ಪ್ರಮುಖ ತರಬೇತಿ ಸಂಸ್ಥೆಯಾದ ಬೆಂಗಳೂರಿನ ನ್ಯಾಷನಲ್ ಕ್ರಿಕೆಟ್ ಅಕಾಡೆಮಿ ಆಯೋಜಿಸಿದ ಕೋಚ್ ಲೆವೆಲ್-ಬಿ ಪರೀಕ್ಷೆಯಲ್ಲಿ ಅವರು ಉತ್ತೀರ್ಣರಾಗಿದ್ದಾರೆ. ಈ ಮೂಲಕ ರೈ ಅವರು ರಾಜ್ಯ ಅಕಾಡೆಮಿಗಳ ಕ್ರಿಕೆಟ್ ಆಟಗಾರರನ್ನು ತರಬೇತಿಗೊಳಿಸಲು ಅರ್ಹತೆ ಪಡೆದಿದ್ದಾರೆ.

ಭಾರತದ ಖ್ಯಾತ ಕ್ರಿಕೆಟ್ ಆಟಗಾರರಾದ ಗೌತಮ್ ಗಂಭೀರ್, ಅಮಿತ್ ಮಿಶ್ರಾ, ತೇಜಸ್ವಿ ಯಾದವ್ ಮೊದಲಾದವರನ್ನು ಅವರ ಆರಂಭದ ಕ್ರಿಕೆಟ್ ದಿನಗಳಲ್ಲಿ ತರಬೇತಿಗೊಳಿಸಿ ಮುನ್ನಡೆಸಿದ ಕೀರ್ತಿ ಶಿವರಾಮ ರೈ ಅವರದ್ದು. ಶಿವರಾಮ ರೈಯವರ ಈಗಿನ ಸಾಧನೆ ಮುಂದೆ ರಾಷ್ಟ್ರದ ಕ್ರಿಕೆಟ್ ರಂಗಕ್ಕೆ ಹೆಚ್ಚಿನ ಕೊಡುಗೆ ನೀಡುವಂತಾಗಲಿ ಎಂಬ ಆಶಯ ನಮ್ಮದು.

❑ ವೈ ಅವನೀಂದ್ರನಾಥ್ ರಾವ್

# ಭಾರತದ ಸಂಸತ್ತಿಗೆ ವಜ್ರಮಹೋತ್ಸವದ ಸಂಭ್ರಮ



ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಜಾಪ್ರಭುತ್ವದ ತಳಹದಿ ಮೇಲೆ ಸ್ಥಾಪಿಸಲ್ಪಟ್ಟ ಭಾರತದ ಸಂಸತ್ತಿಗೆ ಭಾನುವಾರ ಮೇ 13, 2012ರಂದು 60 ವರ್ಷಗಳು ತುಂಬಿದ ಸವಿನೆನಪಿಗಾಗಿ ಸಂಸತ್ತಿನ ವಿಶೇಷ ಅಧಿವೇಶನವಾಗಿ ಅದರ ವಜ್ರಮಹೋತ್ಸವವನ್ನು ಆಚರಿಸಲಾಯಿತು. ಮೇ 13, 1952ರಂದು ಮೊದಲ ಸಂಸತ್ ಅಧಿವೇಶನ ನಡೆದಿದ್ದಿತು.

ಆರು ದಶಕಗಳ ಹಿಂದೆ ಸ್ಥಾಪಿತವಾದ ಭಾರತದ ಸಂಸತ್ ಒಂದು ಪರಿಪೂರ್ಣವಾದ ಆಧುನಿಕ ರಾಷ್ಟ್ರದ ಅಭಿವೃದ್ಧಿಗಾಗಿ ಸಂವಿಧಾನದ ಆಧಾರದ ಮೇಲೆ ಜಾರಿಯಾಗಿ ನಡೆಯುತ್ತ ಬಂದಿದೆ. ಇಂದಿನ ಸಂಸತ್ತಿನ ಕಾರ್ಯಕಲಾಪಗಳು ಒಂದು ಸ್ವತಂತ್ರ ಪ್ರಯೋಗವಾಗಿರದೆ ಅದು ಇತಿಹಾಸದ ಪುಟಗಳಿಂದ ಕಲಿತ ಪಾಠವಾಗಿದೆ. ಪ್ರಾಚೀನ ಕಾಲದಿಂದಲೂ ಭಾರತದ ಆಡಳಿತ ನಡೆಸಲು ವಿಭಿನ್ನ ತರಹದ ಪದ್ದತಿಗಳು ಜಾರಿಯಲ್ಲಿದ್ದವು. ಮೌರ್ಯರ ಆಡಳಿತ ಕೌಟಿಲ್ಯನ 'ಅರ್ಥಶಾಸ್ತ್ರ'ದ ಆಧಾರದ ಮೇಲೆ ನಡೆಸಲಾಗುತ್ತಿದ್ದಿತು. ಸಾಮ್ರಾಟ ಅಶೋಕನ ಆಡಳಿತಾವಧಿಯಲ್ಲಿ ಈಗಿರುವಂತೆ ಸುಸಜ್ಜಿತ ಮಂತ್ರಿಮಂಡಲವಿದ್ದಿತು. ಆದರೆ ಅಂದಿನದು ನಿರಂಕುಶ ಆಡಳಿತ. ಯಾಕೆಂದರೆ ಸಾಮ್ರಾಟರ ಆಯ್ಕೆ ಪ್ರಜಾಸತ್ತಾತ್ಮಕವಾಗಿರಲಿಲ್ಲ. ಬದಲಾಗಿ ಬಲವೇ ನ್ಯಾಯ ಸಿದ್ದಾಂತದಂತೆ ಖಡ್ಗ ಬಲದಿಂದ ಅರಸರು ಅಥವಾ ಸಾಮ್ರಾಟರು ಅಧಿಕಾರಕ್ಕೆ ಬರುತ್ತಿದ್ದರು. ಜೊತೆಗೆ ಆನುವಂಶಿಕ ಅರಸೊತ್ತಿಗೆ ಜಾರಿಯಲ್ಲಿ ಇತ್ತು. ಬಲಿಷ್ಠರಾದ ಯುವರಾಜರು ಅಧಿಕಾರಕ್ಕೆ ಬರುತ್ತಿದ್ದರು. 11ನೇ ಶತಮಾನದಿಂದ ಉತ್ತರ ಭಾರತದಲ್ಲಿ ಅರಸೊತ್ತಿಗೆ ಮಾಯವಾಗಿ ಖಡ್ಗ ಬಲವೇ ನ್ಯಾಯ ಸಿದ್ಧಾಂತದಂತೆ ಆಡಳಿತ ಮುಖ್ಯಸ್ಥ ನೇಮಕವಾಗುತ್ತಿದ್ದನು. ದಕ್ಷಿಣ ಭಾರತದ ಕರ್ನಾಟಕದಲ್ಲಿ 12ನೇ ಶತಮಾನದ ಆದಿಯಲ್ಲಿ ಇಂದಿನ ಸಂಸತ್ ವ್ಯವಸ್ಥೆಯ ಪ್ರಯೋಗ ನಡೆಯಿತು. ಮಹಾನ್ ಮಾನವತಾವಾದಿ ಬಸವೇಶ್ವರರ ಮಾರ್ಗದರ್ಶನದಲ್ಲಿ ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಕಲ್ಯಾಣದಲ್ಲಿ ಅನುಭವಮಂಟಪ ಸ್ಥಾಪನೆಯಾಗಿ ಆಗಿನ ರಾಜಕೀಯ, ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿ ಕುರಿತಾದ ಮುಕ್ತ ಚರ್ಚೆ ನಡೆಯುತ್ತಿದ್ದಿತು. ಅನುಭವ ಮಂಟಪದ ಚರ್ಚೆಯಲ್ಲಿ ಭಾಗವಹಿಸುತ್ತಿದ್ದವರು ಸರ್ವಜಾತಿ ಮತ್ತು ಸರ್ವಧರ್ಮಿಯರಾಗಿರುತ್ತಿದ್ದರು. ಅದು ಧರ್ಮಭೇದ, ಜಾತಿಭೇದ, ಲಿಂಗಭೇದವಿಲ್ಲದ ಜಾತ್ಯಾತೀತ ಧರ್ಮಸಂಸದಾಗಿತ್ತು.

ಆದಾಗ್ಯೂ ರಾಜ್ಯಾಡಳಿತದಲ್ಲಿ ಅರಸೊತ್ತಿಗೆ ಮುಂದುವರೆದ್ದಿತ್ತು. ಕಲ್ಯಾಣಿ ಚಾಲುಕ್ಯ ಸಾಮ್ರಾಟ 3ನೇ ಸೋಮೇಶ್ವರನು ಬರೆದ 'ಮಾನಸೋಲ್ಲಾಸ' ಗ್ರಂಥ ಚಾಲುಕ್ಯರ ಆಡಳಿತ ಪದ್ಧತಿಗೆ ಮೂಲ ಆಧಾರವಾಗಿತ್ತು. 16ನೇ ಶತಮಾನದಲ್ಲಿ ಉತ್ತರ ಭಾರತದಲ್ಲಿ ಮೊಗಲ ಸಾಮ್ರಾಜ್ಯದ ಆಳ್ವಿಕೆ ಪ್ರಾರಂಭವಾದಾಗ ನಿರಂಕುಶ ಪ್ರಭುತ್ವದ ಅರಸೊತ್ತಿಗೆಯು ಮುಂದುವರೆಯಿತು. ಸಂಪ್ರದಾಯದಂತೆ ಸಾಮ್ರಾಜ್ಯದ ಹಿರಿಯ ಮಗನನ್ನು ಯುವರಾಜ ಎಂದು ಘೋಷಿಸಲಾಗುತ್ತಿತ್ತು. ಅವನೇ ಮುಂದಿನ ಸಾಮ್ರಾಟ ಅಥವಾ ಬಾದಶಹ ಎಂದು ನೇಮಕ ಮಾಡಿದರೂ ಖಡ್ಗ ಬಲವೇ ನ್ಯಾಯ ಸಿದ್ಧಾಂತ ಪೂರ್ಣ ಮಾಯವಾಗಲಿಲ್ಲ. ಯಾಕೆಂದರೆ ಬಾದಶಹ ಷಹಜಾಹನನ ಹಿರಿಯ ಮಗ ದಾರಾಶೂಕೊ ಯುವರಾಜನಾಗಿದ್ದವನು ಅಧಿಕಾರಕ್ಕೆ ಬಂದರೂ, ಬಲಿಷ್ಠನಾಗಿದ್ದ ಔರಂಗಜೇಬನು ತಂದೆ ಹಾಗೂ ಸಹೋದರರನ್ನು ಯುದ್ಧದಲ್ಲಿ ಸೋಲಿಸಿ ಅವರನ್ನು ಬಂಧನದಲ್ಲಿಟ್ಟು ಮೊಗಲ ಸಾಮ್ರಾಟನಾದ ಉದಾಹರಣೆ ಇತಿಹಾಸದ ಪುಟಗಳಲ್ಲಿ ರಾರಾಜಿಸುತ್ತಿರುವುದು. ಮೊಗಲ ಸಾಮ್ರಾಜ್ಯದ ಅವಧಿಯಲ್ಲಿ ವ್ಯಾಪಾರದ ಅನುಮತಿ ಪಡೆದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಭಾರತದ ಅಂದಿನ ರಾಜಕೀಯ ಅರಾಜಕತೆಯ ಲಾಭ ಪಡೆದು ರಾಜಕೀಯ ಚದುರಂಗದಾಟದಲ್ಲಿ ಭಾಗಿಯಾಗಿ 1757ರ ಪ್ಲಾಸಿ ಕದನದಲ್ಲಿ ವಿಜಯ ಸಾಧಿಸಿ ರಾಜಕೀಯ ಪ್ರಭುತ್ವ ಪಡೆಯಿತು. ಮುಂದುವರೆದು ಭಾರತದಲ್ಲಿನ ಸಂಸ್ಥಾನಾಧೀಶರು ಹಾಗೂ ಜಮೀನುದಾರರನ್ನು ಸದೆಬಡಿದು ಬ್ರಿಟಿಷ್ ಸಾಮ್ರಾಜ್ಯ ಸ್ಥಾಪಿಸುವಲ್ಲಿ ಯಶಸ್ವಿಯಾದರು. ಆದರೆ ಸಂಸ್ಥಾನಾಧೀಶರು ಹಾಗೂ ಜಮೀನುದಾರರು ಬಿಳಿಯರ ವಿರುದ್ಧ 1857ರಲ್ಲಿ ತಕ್ಕಮಟ್ಟಿಗೆ ಒಂದಾಗಿ ದಂಗೆಯೆದ್ದರು. ಅಖಿಲ ಭಾರತ ಮಟ್ಟದ ಬಲಿಷ್ಠ ನಾಯಕತ್ವದ ಕೊರತೆಯಿಂದಾಗಿ ಸುಸಜ್ಜಿತವಾಗಿದ್ದ ಬ್ರಿಟಿಷ್ ಇಸ್ಟ್ ಇಂಡಿಯಾ ಕಂಪನಿ ಸೈನ್ಯವನ್ನು ಸೋಲಿಸಿ ಭಾರತದ ನೆಲದಿಂದ ಅವರನ್ನು ಓಡಿಸಲು ಸಾಧ್ಯವಾಗಲಿಲ್ಲ. ಆದರೂ 1857ರ ದಂಗೆಯಿಂದ ಭಾರತದಲ್ಲಿ ಕಂಪನಿ ಆಡಳಿತ ಕೊನೆಗೊಂಡು ಭಾರತ ಬ್ರಿಟಿಷ್ ಸಾಮ್ರಾಜ್ಯದ ಒಂದು ವಸಾಹತು ರಾಷ್ಟ್ರವಾಯಿತು. ಭಾರತದಲ್ಲಿ ಅಣಬೆಗಳಂತೆ ಬೆಳೆದು ನಿಂತಿದ್ದ ಸಂಸ್ಥಾನಾಧೀಶರು ಹಾಗೂ ಜಮೀನುದಾರರ ನಿರಂಕುಶ ಆಡಳಿತ ಮುಂದುವರಿಯಲು ಬ್ರಿಟಿಷ್ ಮಹಾರಾಣಿ ಅವಕಾಶ ಕಲ್ಪಿಸಿದಳು. ಆದರೆ 1885ರಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಸ್ಥಾಪನೆಯಿಂದ ದೇಶದಲ್ಲಿ ರಾಷ್ಟ್ರೀಯತೆ ಭಾವನೆ ಬೆಳೆದು ವಸಾಹತುಶಾಹಿ ಬ್ರಿಟಿಷರ ವಿರುದ್ಧ ಹೋರಾಡಲು ಲೋಕಮಾನ್ಯ ತಿಲಕ್, ಬಿಪಿನ ಚಂದ್ರಪಾಲ್, ಲಾಲಾ ಲಜಪತರಾಯ್, ಮೋತಿಲಾಲ ನೆಹರು, ಸಿ.ಆರ್. ದಾಸ್, ಮಹಾತ್ಮ ಗಾಂಧಿ, ಶ್ರೀನಿವಾಸರಾವ ಕೌಜಲಗಿ, ಗಂಗಾಧರರಾವ್ ದೇಶಪಾಂಡೆ, ಡಾ. ಎನ್. ಎಸ್. ಹರ್ಡಿಕರ್, ಜವಾಹರಲಾಲ ನೆಹರು, ಸುಭಾಷ್‌ಚಂದ್ರ ಬೋಸ್‌ರಂತಹ ನಾಯಕರ ನಾಯಕತ್ವದಲ್ಲಿ ರಾಷ್ಟ್ರೀಯ ಆಂದೋಲನವಾಗಿ ಆಗಸ್ಟ್ 15, 1947ರಂದು ಭಾರತ ಬ್ರಿಟಿಷ್ ವಸಾಹತುಶಾಹಿ ಹಿಡಿತದಿಂದ ಬಂಧನ ವಿಮೋಚನೆಯಾಯಿತು. ಆಗ ಭಾರತಕ್ಕೆ ತನ್ನದೇ ಆದ ಸಂವಿಧಾನವಿರಲಿಲ್ಲ. ಹೀಗಾಗಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ 308 ಸದಸ್ಯರನ್ನೊಳಗೊಂಡ ಭಾರತದ ಸಂವಿಧಾನ ಕರಡು ಪ್ರತಿ ನಿರ್ಮಾಣ ಮಾಡಲು ಡ್ರಾಫ್ಟಿಂಗ್ ಕಮಿಟಿಯನ್ನು ನೇಮಿಸಲಾಯಿತು. ಸಂವಿಧಾನ ರಚನೆಯಲ್ಲಿ ಸರ್ವ ಸದಸ್ಯರು ಸಮಾನವಾಗಿ ಕಾರ್ಯನಿರ್ವಹಿಸಿ ಕರಡು ಪ್ರತಿಯನ್ನು ತಯಾರಿಸಿದರು. ಆದಾಗ್ಯೂ ಭಾರತದ ಸಂಸತ್ತು ಬ್ರಿಟಿಷ್ ಸಂಸತ್ತಿನ ಮಾದರಿ ಅಥವಾ ಬಳುವಳಿಯಾಗಿರುವುದು. ಇಂಗ್ಲೆಂಡ್ ಮತ್ತು ಭಾರತದ ಸಂಸದಗಳ ನಡುವಿನ ವ್ಯತ್ಯಾಸವೆಂದರೆ ಭಾರತದ ರಾಷ್ಟ್ರಪತಿ ಚುನಾಯಿತರಾಗುವವರು. ಆದರೆ ಇಂಗ್ಲೆಂಡ್‌ನಲ್ಲಿ ಅನುವಂಶಿಕ ಅರಸೊತ್ತಿಗೆ ಹಾಗೆ ಮುಂದುವರೆದಿದೆ.

ಭಾರತದ ಸಂವಿಧಾನ ಜಾರಿಯಾದ ನಂತರ ರಾಷ್ಟ್ರದಾದ್ಯಂತ ಅಕ್ಟೋಬರ್ 25, 1951ರಿಂದ ಫೆಬ್ರವರಿ 21, 1952ರ ಅವಧಿಯಲ್ಲಿ ಲೋಕಸಭೆಗೆ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆಯಿತು. ಏಪ್ರಿಲ್ 3, 1952ರಂದು ರಾಜ್ಯ ಸಭೆ ಅಸ್ತಿತ್ವಕ್ಕೆ ಬಂದಿತು. ಏಪ್ರಿಲ್ 17, 1952ರಂದು ಮೊದಲ ಲೋಕಸಭೆಯ ಸಂಘಟನೆಯಾಯಿತು. ಲೋಕಸಭೆ ಮತ್ತು ರಾಜ್ಯ ಸಭೆಯನ್ನೊಳಗೊಂಡ ಸಂಸತ್ತಿನ ಪ್ರಥಮ ಅಧಿವೇಶನ ಮೇ 13, 1952 ಮುಂಜಾನೆ 10.45ಕ್ಕೆ ಆರಂಭವಾಯಿತು. ಡಾ. ಎಸ್. ರಾಧಾಕೃಷ್ಣನ್ ಅವರು ರಾಜ್ಯಸಭೆಯ ಪ್ರಥಮ ಸಭಾಪತಿಗಳಾಗಿ ನೇಮಕಗೊಂಡರು. ಲೋಕಸಭೆಗೆ ಜಿ.ವಿ. ಮಾವಳಂಕರ್ ಅವರನ್ನು ಮಧ್ಯಂತರ ಸಭಾಪತಿಗಳಾಗಿ ಹೆಸರಿಸಲಾಯಿತು. ನಂತರ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅವರು ಹೊಸದಾಗಿ ಆಯ್ಕೆಯಾದ ಸಂಸದ ಸದಸ್ಯರು ಪ್ರಮಾಣ ವಚನ ಸ್ವೀಕರಿಸುವಂತೆ ನಿರ್ದೇಶನ ನೀಡಿದರು. ಮೇ 15, 1952ರಂದು ಸಂಸತ್ತಿನ ಅಧಿವೇಶನ ನಡೆದು ಲೋಕಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಿತು. ಪ್ರಧಾನಮಂತ್ರಿ ಜವಾಹರಲಾಲ ನೆಹರು ಅವರು

ಲೋಕಸಭಾಧ್ಯಕ್ಷರ ಹುದ್ದೆಗೆ ಜಿ.ವಿ. ಮಾವಳಂಕರ್ ಅವರ ಹೆಸರು ಪ್ರಸ್ತಾಪಿಸುವ ಗೊತ್ತುವಳಿಯನ್ನು ತಂದರು. ಅದನ್ನು ಸಂಸದೀಯ ವ್ಯವಹಾರಗಳ ಮಂತ್ರಿ ಸತ್ಯನಾರಾಯಣ ಸಿನ್ಹಾ ಅವರು ಅನುಮೋದಿಸಿದರು. ಕಮ್ಯುನಿಸ್ಟ್ (CPI) ಪಕ್ಷದ ಕಣ್ಣಾನೂರ ಸಂಸದ ಎ.ಕೆ. ಗೋಪಾಲನ್ ಅವರು ಶಂಕರ್ ಎಸ್. ಮೋರೆ ಅವರ ಹೆಸರನ್ನು ಪ್ರಸ್ತಾಪಿಸುವ ಗೊತ್ತುವಳಿ ತಂದರು. ಅದನ್ನು ಟಿ.ಕೆ. ಚೌಧರಿ ಅನುಮೋದಿಸಿದರು. ಲೋಕಸಭಾಧ್ಯಕ್ಷ ಹುದ್ದೆಗೆ ಚುನಾವಣೆ ಪೈಪೋಟಿ ನಡೆಸುವ ಎಲ್ಲಾ ಸಾಧ್ಯತೆಗಳು ಕಂಡು ಬಂದವು. ಚುನಾವಣೆ ನಡೆದರೂ ಭಾರತದ ರಾಷ್ಟ್ರೀಯ ಕಾಂಗ್ರೆಸ್ ಅಭ್ಯರ್ಥಿ ಮಾವಳಂಕರ್ ಅವರ ಆಯ್ಕೆ ಖಚಿತವಾಗಿತ್ತು. ಏಕೆಂದರೆ ಕಾಂಗ್ರೆಸಿಗೆ ಲೋಕಸಭೆಯಲ್ಲಿ ಭಾರೀ ಬಹುಮತವಿತ್ತು. ಮದ್ರಾಸಿನ ಡಾ. ಲಂಕಾ ಸುಂದರಂ ಅವರು ಮಧ್ಯ ಪ್ರವೇಶಿಸಿ ಆಡಳಿತರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ನಡುವೆ ಹೊಂದಾಣಿಕೆಯಾಗಿ ಲೋಕಸಭೆಯ ಉಪಸಭಾಧ್ಯಕ್ಷ ಸ್ಥಾನ ವಿರೋಧ ಪಕ್ಷದವರಿಗೆ ದೊರೆಯುವಂತೆ ಮಾಡಲು ಪ್ರಯತ್ನಿಸಿದರು. ಆದರೆ ಅದನ್ನು ವಿರೋಧಿಸಲಾಯಿತು. ಚುನಾವಣೆ ನಡೆಸದೆ ಸಂಖ್ಯಾಬಲದ ಆಧಾರದ ಮೇಲೆ ಜಿ.ವಿ. ಮಾವಳಂಕರ್ ಅವರು ಲೋಕಸಭಾಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ಘೋಷಿಸಲಾಯಿತು. ಎಂ.ಎ. ಅಯ್ಯಂಗಾರ್ ಅವರು ಉಪಲೋಕಸಭಾಧ್ಯಕ್ಷರಾಗಿ ಆಯ್ಕೆಯಾದರು. ಮಾವಳಾಂಕರ ಅವರನ್ನು ಅಭಿನಂದಿಸುತ್ತ, ಬ್ರಿಟಿಷ್ ಸಂಸತ್ತಿನ ಶಿಷ್ಟಾಚಾರಗಳನ್ನು ಅಳವಡಿಸಿಕೊಂಡರು, ಭಾರತದ ಸಂಸತ್ ಆ ಶಿಷ್ಟಾಚಾರಗಳನ್ನು ಪಾಲಿಸದೆ ಇರುವುದು ವಿಷಾದನೀಯ ಎನ್ನುತ್ತ ಎನ್. ಎಸ್. ಮೋರೆಯವರು ಅವರ ಆಯ್ಕೆ ಕುರಿತು : "Unfortunately, some of these conventions have become a casualty even at the very first meeting of our House" ಎಂದು ಪ್ರತಿಕ್ರಿಯಿಸಿದರು. ಬಹುಮತವಿರುವ ಕಾಂಗ್ರೆಸ್ ನಾಯಕತ್ವದ ಸರಕಾರದಲ್ಲಿ ಅಲ್ಪ ಸಂಖ್ಯೆಯಲ್ಲಿರುವ ವಿರೋಧ ಪಕ್ಷಗಳಿಗೆ ನ್ಯಾಯ ಸಿಗಲಾರದು : "There are so many victorious leaders of the victorious party here and it is not unusual that the wine of victory goes to their heads and the minorities suffer" ಎಂದು ಮಾತು ಮುಗಿಸಿದರು.

ಲೋಕಸಭಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ಬಗ್ಗೆ ವಿಷಾದ ವ್ಯಕ್ತಪಡಿಸುತ್ತ ಜನ ಸಂಘದ ಸಂಸ್ಥಾಪಕ ಶ್ಯಾಮ ಪ್ರಸಾದ ಮುಖರ್ಜಿಯವರು : "I am not very happy at way in which the establishment of sound conventions has been retarded in the selection of the Speaker" ಎಂದು ನುಡಿದರು. ಲೋಕಸಭಾಧ್ಯಕ್ಷರನ್ನು ಉದ್ದೇಶಿಸಿ : "Of course, the size of the treasury benches and the Government Party is big enough but still, for the first time in free India, we are going to have a Parliament where the Opposition will not be negligible. It will be for you to see how conventions and traditions are respected so that a healthy constitutional life may develop within the walls of this House" ಎಂದರು.

ಸುಚೇತ ಕೃಪಾಲಾನಿಯವರು ಮಾವಳಂಕರ್ ಅವರಿಗೆ ಅಭಿನಂದನೆ ಸಲ್ಲಿಸುತ್ತ ಸಣ್ಣ ಪಕ್ಷಗಳ ಹಿತ ಕಾಪಾಡುವ ಅವಶ್ಯಕತೆ ಕುರಿತು : "Not only the members of the Congress Party but members of various other Political Parties and Independent members are representing the people of India in this House. Many of these parties are numerically small but I trust all the rights and privileges, not only of all the parties but of each member would be safe in your hands" ಎಂದು ನೀತಿವಾದ ಹೇಳಿದರು. ಮೇ 31, 1952ರಂದು ಎಸ್.ವಿ. ಕೃಷ್ಣಮೂರ್ತಿರಾವ್‌ರವರು ರಾಜ್ಯಸಭೆಯ ಮೊದಲ ಉಪಸಭಾಪತಿಗಳಾಗಿ ನೇಮಕವಾದರು. ಇವರೇ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು.

ಆರು ದಶಕದ ನಂತರದ ನಮ್ಮ ಸಂಸತ್ತಿನ ಒಟ್ಟು ಬೆಳವಣಿಗೆಯಲ್ಲಿ ಸಮುದ್ರದಷ್ಟು ಬದಲಾವಣೆಯನ್ನು ಕಾಣುತ್ತೇವೆ. ಸಂಸತ್ತಿನ ವಜ್ರಮಹೋತ್ಸವ ಸಂದರ್ಭದಲ್ಲಿ ಘನತೆವೆತ್ತ ಪ್ರತಿಭಾ ಪಾಟೀಲರು ಮಹಿಳಾ ರಾಷ್ಟ್ರಾಧ್ಯಕ್ಷರಾಗಿರುವರು. ಡಾ. ಮನಮೋಹನ್ ಸಿಂಗ್ ಅವರು ದೇಶದ ಪ್ರಧಾನ ಮಂತ್ರಿಗಳಾಗಿರುವರು. ಅದರಂತೆ ಮೀರಾಕುಮಾರ್ ಅವರು ಮಹಿಳಾ ಲೋಕಸಭಾಧ್ಯಕ್ಷರಾಗಿರುವರು. ಬಲಿಷ್ಠ ವಿರೋಧಪಕ್ಷ ಹೆಸರಿಸಿದ ಕರಿಯಮುಂಡ ಅವರು ಲೋಕಸಭೆಯ ಉಪ ಸಭಾಧ್ಯಕ್ಷರಾಗಿರುವರು. ಭಾರತೀಯ ಜನತಾಪಕ್ಷದ ಸುಷ್ಮಾ ಸ್ವರಾಜ್ ಅವರು ಲೋಕಸಭೆಯಲ್ಲಿ ಮಹಿಳಾ ವಿರೋಧಪಕ್ಷದ ನಾಯಕಿಯಾದರೆ, ಅರುಣ್ ಜೇಟ್ಲಿಯವರು ರಾಜ್ಯಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿರುವರು. ಪ್ರಸ್ತುತ ಲೋಕಸಭಾ ಸದಸ್ಯರ ಸಂಖ್ಯೆ 544. ಅದರಲ್ಲಿ 485 ಪುರುಷ ಮತ್ತು 59 ಮಹಿಳಾ ಸಂಸದರಿರುವರು. ಇವರ ಅಧಿಕಾರದ ಅವಧಿ ಐದು ವರ್ಷ. ಅದರಂತೆ ರಾಜ್ಯಸಭೆಯ ಒಟ್ಟು ಸಂಖ್ಯೆ 250 ಅದರಲ್ಲಿ 238 ಸಂಸದರು ಆಯಾ ರಾಜ್ಯದ ಜನಸಂಖ್ಯೆ ಆಧಾರದ ಮೇಲೆ ಆರು ವರುಷದ ಅವಧಿಗೆ ಚುನಾಯಿತರಾಗಿರುವರು. ಅದರಂತೆ 12 ಸಂಸದರು ನಾಮಾಂಕಿತ ರಾಜ್ಯಸಭೆಯ ಸದಸ್ಯರು. ಆರು ದಶಕಪೂರ್ಣಗೊಳಿಸಿದ ಭಾರತದ ಸಂಸತ್ತಿಗೆ ನಮೋ ಎನ್ನಲೇಬೇಕು. (ವಿವಿಧ ಮೂಲಗಳಿಂದ)

❑ **ಡಾ. ಜಿ.ಎ. ಬಿರಾದಾರ**

**ಓದುಗರ ಪತ್ರ**

# ಎಂ.ಕೆ. ಧರ್ಮರಾಜ – ಒಂದು ನೆನಪು

ನಾನು ಧರ್ಮರಾಜರನ್ನು ಮೊದಲನೆಯ ಬಾರಿ ನೋಡಿದ್ದು 1990ರ ದಶಕದಲ್ಲಿ ದೆಹಲಿಯಲ್ಲಿ ಮೊದಲ ಬಾರಿ ಜರುಗಿದ ಡಾ. ರಾಜ್‌ಕುಮಾರರ ಹಾಡಿನ ಕಾರ್ಯಕ್ರಮದಲ್ಲಿ. ಆಗ ನಾನು ಪಶ್ಚಿಮವಿಹಾರದಲ್ಲಿದ್ದೆ. ಅಲ್ಲೇ ಸಮೀಪದಲ್ಲಿ ಇದ್ದ ಸರವು ಕೃಷ್ಣ ಭಟ್ಟರು ನನಗೆ ಮತ್ತು ನನ್ನ ಹೆಂಡತಿಗೆ ಅವರ ಮನೆಗೆ ಬರಲು ಹೇಳಿದ್ದರು. ಉಡುಪಿಯಿಂದ ಬಂದ ಬೊಳುವಾರರು ಅವರ ಮನೆಯಲ್ಲಿ ಇದ್ದರು. ಕೃಷ್ಣಭಟ್ಟರು ನಮ್ಮನ್ನು ಕಾರಿನಲ್ಲಿ ಕರೆದುಕೊಂಡು ಎಂ.ಕೆ. ಧರ್ಮರಾಜರ ಮನೆಗೆ ಹೋಗಿ ಅವರನ್ನು ಕರೆದುಕೊಂಡು ಕಾರ್ಯಕ್ರಮವಾಗುವ ಸ್ಥಳಕ್ಕೆ ಬಂದೆವು. ದಾರಿಯಲ್ಲಿ ನಾನು ಧರ್ಮರಾಜರವರನ್ನು ಆ ಕಾಲದಲ್ಲಿ ಇದ್ದ, ಮೊದಲು ಇದ್ದ ಕನ್ನಡಿಗರ ವಿಷಯ ಕೇಳಿದೆ. ಅವರೆಲ್ಲರ ಪರಿಚಯ ಧರ್ಮರಾಜರಿಗೆ ಇತ್ತು.

ಇದಾದ ನಂತರ 3–4 ವರುಷಗಳ ಮೊದಲು ಅವರ ಮನೆಗೆ ಹೋಗಿದ್ದೆ. ಅವರ ಮನೆ ವಿಶಾಲವಾಗಿದ್ದು ಗ್ರೌಂಡ್ ಫ್ಲೋರ್‌ನಲ್ಲಿತ್ತು. ಜೈನ ಧರ್ಮಕ್ಕೆ ಸಂಬಂಧಿಸಿದ ಹಲವಾರು ಪುಸ್ತಕಗಳಿದ್ದವು. ನಾನು ನನ್ನ ಪೂರಾ ಹೆಸರು ಹೇಳಿದೆ–ಪಡುಬಿದ್ರಿ ವೆಂಕಟ್ರಮಣ ನಾಯಕ್ ಎಂದು. ಆ ದಿನದಿಂದ ಅವರು ನನಗೆ ಪಡುಬಿದ್ರಿಯವರು ಎಂದೇ ಕರೆಯುತ್ತಿದ್ದರು. ಧರ್ಮರಾಜರಿಗೆ ಪ್ರಾಯವಾಗಿದ್ದರೂ ಅವರ ನೆನಪು ಬಹಳ ಹರಿತವಾಗಿತ್ತು.

ಅವರ ಮನೆಯ ಸಮೀಪ ಶಾರದಾ ಪ್ರಸಾದ್‌ರವರು ಇದ್ದರು. ಅವರ ಮನೆಗೆ ಕೂಡಾ ನಾನು ಹೋಗಿದ್ದೆ. ನೆಹರೂ ಅವರ ಬಗ್ಗೆ ಹೊರದೇಶಗಳ ಪತ್ರಿಕೆಗಳಲ್ಲಿ ಲೇಖನ ಬರೆಯುತ್ತಿದ್ದರು.

ಧರ್ಮರಾಜರ ಮನೆಗೆ ಆಗಾಗ ನಾನು ಹೋಗುತ್ತಿದ್ದೆ. ಪ್ರತಿ ಸಾರಿ ಅವರು ನನಗೆ ಜೈನ ಧರ್ಮಗಳ ಪುಸ್ತಕಗಳನ್ನು ಕೊಡುತ್ತಿದ್ದರು. ಪಶ್ಚಿಮ ವಿಹಾರದ ಕರ್ನಾಟಕ ಬ್ಯಾಂಕ್‌ನ ಶಾಖೆ ಉದ್ಘಾಟನೆಯ ಸಮಯದಲ್ಲಿ ಧರ್ಮರಾಜರು ಬಂದಿದ್ದರು.

ನಾನು ಡಿಸೆಂಬರ್ 2011ರ ವೇಳೆಗೆ ಮಂಗಳೂರಿಗೆ ಹೋಗಿದ್ದೆ. ನಮ್ಮ ಮನೆಯ ಸಮೀಪ ಬಲ್ಲಾಳ್‌ಭಾಗ್ ಇತ್ತು. ಅಲ್ಲಿ ಸುರೇಶ ಬಲ್ಲಾಳರಲ್ಲಿ ಧರ್ಮರಾಜರ ವಿಷಯ ಕೇಳಿದೆ. ಆಗ ಅವರು ಧರ್ಮರಾಜರು ಈಗ ಮಂಗಳೂರಿನಲ್ಲಿ ಮಗ ಡಾ. ಸಿ.ಕೆ. ಬಲ್ಲಾಳರ ಮನೆಯಲ್ಲಿ ಇದ್ದಾರೆ ಎಂದರು. ಅದೇ ಸಮಯದಲ್ಲಿ ವೇಣೂರಿನಲ್ಲಿ ಗೊಮ್ಮಟಾಭಿಷೇಕ ಇತ್ತು. ಅವರ ಮನೆಗೆ ಹೋಗಿ ನಿಮ್ಮ ತಂದೆಯವರನ್ನು ನೋಡಬೇಕು ಎಂದೆ. ಆಗ ಡಾ. ಸಿ.ಕೆ. ಬಲ್ಲಾಳರು ತಮ್ಮ ಪರಿಚಯ ಎಂದು ಕೇಳಿದರು ಅದಕ್ಕೆ ನಾನು ನಿಮ್ಮ ತಂದೆಗೆ ನನ್ನ ಸರಿ ಪರಿಚಯ ಉಂಟು ಎಂದೆ. ಆಗ ಧರ್ಮರಾಜರು ಕೋಣೆಯಿಂದ ಕೋಲು ಹಿಡಿದು ಬಂದರು. ಹೋ, ಪಡುಬಿದ್ರಿಯವರೇ ಏನು ವಿಷಯ ಎಂದರು. ಅದಕ್ಕೆ ನಾನು ನೀವು ಈಗ ಡೆಲ್ಲಿ ಬಿಟ್ಟು ಮಂಗಳೂರಿಗೆ ಬಂದಿದ್ದೀರಿ ಎಂದು ತಿಳಿದು ನಿಮ್ಮನ್ನು ನೋಡಲು ಬಂದೆ ಎಂದೆ. ನನಗೆ ಈಗ ಸರಿಯಾಗಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಮಾರ್ಚ್ ತಿಂಗಳಲ್ಲಿ ನಾನು ದಿಲ್ಲಿಗೆ ಹೋಗುತ್ತೇನೆ. ಆಗ ಮನೆಗೆ ಬನ್ನಿ ನಿಮಗೆ ಒಳ್ಳೆ ಪುಸ್ತಕ ಕೊಡುತ್ತೇನೆ ಎಂದರು.

ನಾನು ಮಾರ್ಚ್ ತಿಂಗಳಲ್ಲಿ ದಿಲ್ಲಿಗೆ ಬಂದರೂ ಕಾರಣಾಂತರದಿಂದ ಅವರ ಮನೆಗೆ ಹೋಗಲು ಆಗಲಿಲ್ಲ. ಮೇ ತಿಂಗಳ ಅಭಿಮತದಲ್ಲಿ 'ಅಗಲಿದ ಧರ್ಮರಾಜ'ರ ಭಾವಚಿತ್ರ ನೋಡಿದೆ. ಅವರ ಅಗಲಿದ ಆತ್ಮಕ್ಕೆ ನನ್ನ ನಮನ.

❑ **ಪ.ವೆಂ. ನಾಯಕ್, ನವದೆಹಲಿ**

# ಪ್ರೇಮದ ಪರಿ



ದೆಹಲಿಯ ಕನ್ನಡಿಗರಿಗೆ ಲವಲವಿಕೆಯ, ಹದಿಹುಮ್ಮಸ್ಸಿನ ಲಕ್ಷಣದ ಮೂರ್ತಿಯಾಗಿ ಚಿರಪರಿಚಿತರಿರುವ ಶ್ರೀಮತಿ ಸಾವಿತ್ರಿ ಶಾಸ್ತ್ರಿ ಅವರು ಅರ್ಧಶತಮಾನಕ್ಕೂ ಮೀರಿ ದೆಹಲಿಯಲ್ಲಿ ನೆಲೆಸಿ ಕನ್ನಡ ಸಂಸ್ಕೃತಿ, ಕನ್ನಡದ ಚೆಲುವನ್ನು ತನ್ನ ಮನೆ–ಮನದಂಗಳದಲ್ಲಿ ಉಳಿಸಿ ಬೆಳೆಸಿಕೊಂಡು ಬಂದ ಅಚ್ಚ ಕನ್ನಡತಿ. ದೆಹಲಿ ಶಿಕ್ಷಣ ಸಂಸ್ಥೆಯೊಂದಿಗೆ ಕರುಳು ಸಂಬಂಧ ಹೊಂದಿದ ಸಾವಿತ್ರಿ ಶಾಸ್ತ್ರಿ ಅವರು ಮೊನ್ನೆ ಮೊನ್ನೆಯವರೆಗೂ ತಮ್ಮ ಎಂಬತ್ತರ ವಯಸ್ಸಿನಲ್ಲೂ ಎರಡು ಬಾರಿ ದೆಹಲಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸಕ್ರಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದವರು. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಷಿಯೇಶನ್‌ನ ಹಿರಿಯ ಸದಸ್ಯೆಯಾಗಿರುವ ಅವರು ಈಗಲೂ ಉತ್ಸಾಹದ ಚಿಲುಮೆ. 'ದೆಹಲಿಯ ವಿಶಿಷ್ಠ ಕನ್ನಡಿಗ' ಪ್ರಶಸ್ತಿ ಪಡೆದ ಹಿರಿಯ ಸದಸ್ಯೆ. ಇನ್ನೊಬ್ಬರಿಗೆ ಉಣ್ಣಿಸುವ, ತಿನ್ನಿಸುವ ಮನೋಭಾವದ, ಶ್ರೀಮಂತ ಹೃದಯದ ಸಾವಿತ್ರಿ ಶಾಸ್ತ್ರಿ ಅತಿಥಿ ಸತ್ಕಾರಕ್ಕೆ ಇನ್ನೊಂದು ಹೆಸರು. ಕಿರಿಯರಿಗೆ ಹಾಗಲ್ಲಾ ಹೀಗೆ ಮಾಡಿ ಎಂದು ತಪ್ಪಾದಲ್ಲಿ ತಿದ್ದಿ, ಮಾರ್ಗದರ್ಶನ ನೀಡುತ್ತಾ ಈಗಲೂ ಒಂದಲ್ಲಾ ಒಂದು ಕನ್ನಡ ಕೈಂಕರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಎಲ್ಲರ ಬಗ್ಗೆಯೂ ಕಾಳಜಿ, ಕಳಕಳಿ, ಕಕ್ಕುಲತೆ ಅವರಿಗೆ. ಅವರೊಂದಿಗೆ ಕೂತರೆ ಕಾಲದ ಪರಿವೆಯೇ ಇರುವುದಿಲ್ಲ. ರಾಯಭಾರಿ ವಿನ್ಯಾಸದ ವಿಶಾಲವಾದ ಸುಜಾನ್ ಸಿಂಗ್ ಪಾರ್ಕ್‌ನ ಅವರ ಮನೆಯನ್ನು ಪ್ರವೇಶಿಸುತ್ತಿದ್ದಂತೆ ಎಂಥದೋ ದಿವ್ಯತೆ ಎದುರಾಗುತ್ತದೆ. ಇದೇ ವಿಶಾಲವಾದ ಹಾಲಿನಲ್ಲಿ ಒಂದು ಕಾಲಕ್ಕೆ ರಾಷ್ಟ್ರದ ಕುರಿತಾಗಿ ನಡೆದಿರಬಹುದಾದ ಗಂಭೀರ ಚರ್ಚೆಗಳು, ವಾಗ್ವಾದಗಳು, ಸ್ವಾತಂತ್ರ್ಯ ಹೋರಾಟಗಾರರ, ದೇಶಭಕ್ತರ ಆ ಕಾಲ ಕಣ್ಣೆದುರು ಹಾದುಹೋಗುತ್ತದೆ. ಚಟ್ನಿ–ಉಪ್ಪಿನಕಾಯಿ ವಿಧಾನದಿಂದ ಹಿಡಿದು ಅವರ ಕಣ್ಣೆದುರಿಗೇ ಬದಲಾವಣೆಯತ್ತ ಧಾಪುಗಾಲು ಹಾಕಿದ, ಆಧುನಿಕವಾಗಿ ನವೀಕರಣಗೊಂಡ ಸ್ವಾತಂತ್ರೋತ್ತರ ಭಾರತದ ಅನೇಕ ಘಟನೆಗಳನ್ನು ಹಾಗೂ ಹಳೆಯ ದೆಹಲಿಯ ಪಳೆಯುಳಿಕೆಗಳ ಚಿತ್ರವನ್ನು ಹಾಗೇ ಬಿಚ್ಚಿಡುತ್ತಾರೆ ಸಾವಿತ್ರಿ ಶಾಸ್ತ್ರಿ.

ಸಾವಿತ್ರಿ ಶಾಸ್ತ್ರಿ 1930, ಮಾರ್ಚ್ 23 ರಂದು ಕೋಲಾರದಲ್ಲಿ ಹುಟ್ಟಿದರು. ಸ್ವಾತಂತ್ರ್ಯಪೂರ್ವ ಭಾರತದ ಸಂಪ್ರದಾಯಸ್ಥರ ಕುಟುಂಬದ ಕನ್ನಡ ನೆಲೆ, ಕನ್ನಡ ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದ ಆಕೆ ಮುಂದೆ ಉತ್ತರಭಾರತದಲ್ಲೇ ನೆಲೆಸಿಹೋದ ಕನ್ನಡ ಕುಟುಂಬವೊಂದರ ಸೊಸೆಯಾಗಿ ಹೋಗುತ್ತಾರೆಂದು ಬಹುಶಃ ಆಗ ಯಾರೂ ತಿಳಿದಿರಲಿಕ್ಕಿಲ್ಲ. ಅವರ ಅಜ್ಜ ವೆಂಕಟಯ್ಯನವರು ನಂಜನಗೂಡಿನವರು. ಅಜ್ಜಿ–ನರಸಮ್ಮ ನಂಜನಗೂಡಿನಲ್ಲಿ ಶಾಲಾ ಪ್ರಾಂಶುಪಾಲರಾಗಿದ್ದರು. ಹೀಗೆ ಅಜ್ಜ–ಅಜ್ಜಿ ಇಬ್ಬರೂ ಅಧ್ಯಾಪಕ ವೃತ್ತಿಯವರು. ಅವರ ಅಜ್ಜಿ ಆಗಿನ ಕಾಲದಲ್ಲೇ ಮನೆಗೆಲಸವನ್ನೂ, ಅಧ್ಯಾಪಕ ವೃತ್ತಿಯನ್ನೂ ಸಮರ್ಥವಾಗಿ ನಿರ್ವಹಿಸುತ್ತಿದ್ದ ಆಧುನಿಕ ವಿಚಾರದ ಮಹಿಳೆಯಾಗಿದ್ದರೆಂದು ಸಾವಿತ್ರಿ ಅವರು ಹೆಮ್ಮೆಯಿಂದ ಹೇಳುತ್ತಾರೆ. ಆಗಿನ ಕಾಲಕ್ಕೆ ಕುಕ್ಕರ್ ಅಥವಾ ಗ್ಯಾಸ್ ಸ್ಟೌವ್ ಇರಲಿಲ್ಲ. ಸೌದೆಯಲ್ಲೇ ಅಡುಗೆ ಮಾಡಬೇಕಿತ್ತು. ಉದ್ಯೋಗಸ್ಥೆಯಾಗಿದ್ದ ಆಕೆ ಒಲೆ ಉರಿಸಿ ಸಾರಿಗೆ ಬೇಳೆ ಬೇಯಿಸುವುದು ಬಹಳ ಸಮಯ ಹಿಡಿಯುವ ಕೆಲಸವಾದ್ದರಿಂದ, ತೊಗರಿಬೇಳೆಯನ್ನು ಒಟ್ಟಿಗೆ ಹುರಿದು, ಬೀಸಿ ಹಿಟ್ಟುಮಾಡಿಟ್ಟುಕೊಳ್ಳುತ್ತಿದ್ದರಂತೆ. ಅದನ್ನು ಕಲಸಿ ದಿಢೀರ್ ಸಾರು ತಯಾರಿಸುತ್ತಿದ್ದರಂತೆ. ಹೀಗೆ ವೃತ್ತಿಜೀವನವನ್ನೂ, ಮನೆಯನ್ನೂ ಚೊಕ್ಕಟವಾಗಿ ತೂಗಿಸಿಕೊಂಡು ಹೋಗುತ್ತಿದ್ದ ಜಾಣೆ. ಅವರ ಅಜ್ಜಿಯ ಚುರುಕು– ಚಾಕಚಕ್ಯತೆಯ ಬಗ್ಗೆ ಕೇಳುತ್ತಿದ್ದರೆ ಈಗಿನ 21ನೇ ಶತಮಾನದಲ್ಲಿ ನಾವು ಉದ್ಯೋಗಸ್ಥೆಯರಾಗಿ ಕೈಗೊಂದು ಕಾಲಿಗೊಂದು ಯಂತ್ರದ ಸಹಾಯವಿಲ್ಲದೇ ಏನನ್ನೂ ಮಾಡಲಾರದವರಾಗಿದ್ದೇವೆ. ಅವರ ಮುಂದೆ ನಾವು ಸಾಧಿಸಿದುದೇನೂ ಮಹತ್ವದ್ದಲ್ಲ ಎನಿಸುತ್ತದೆ. ಅಜ್ಜಿಯಂತೆಯೇ ಚುರುಕು 'ಹುರುಪಿನ' ಸದಾ ಮುಗುಳ್ನಗುವಿನ ಈ ಮೊಮ್ಮಗಳು–ನಮ್ಮ ಸಾವಿತ್ರಿ ಶಾಸ್ತ್ರಿ.

ಆ ಕಾಲವೊಂದಿತ್ತು. ಮೋಟರ್ ಗಾಡಿ ಸೌಕರ್ಯವಿಲ್ಲದ ಕಾಲದಲ್ಲಿ ಕಾಶಿಗೆ ಹೋದವರು ಮರಳಿ ಬರುವುದಿಲ್ಲ ಎಂಬ ನಂಬಿಕೆಯ ಕಾಲ. ಅವರ ಶ್ರಾದ್ಧ ಕರ್ಮಗಳನ್ನೆಲ್ಲ ತೀರಿಸಿ ಅತ್ತು ಕರೆದು ಗಂಗಾ ಸಮಾರಾಧನೆಯನ್ನೂ ಮಾಡಿ ಬೀಳ್ಕೊಡುತ್ತಿದ್ದರಂತೆ. 180 ವರ್ಷಗಳ ಹಿಂದೆ ಹಾಗೇ ಕಾಶಿ ಯಾತ್ರೆಗೆಂದು ಹೋಗಿ ಮರಳಿ ಊರಿಗೆ ಹೋಗದೇ ಬಿಹಾರದ ಗಯಾದಲ್ಲಿ ನೆಲೆಸಿಹೋದ ಕುಟುಂಬ ದಿ. ಶ್ರೀ ಗೋಪಾಲ ಶಾಸ್ತ್ರಿಗಳ ಪೂರ್ವಜರದ್ದು. ಯಾತ್ರೆಗೆಂದು ಬಂದ ಅವರ ಪೂರ್ವಜರು ಕಾಶಿಯಲ್ಲಿಯೂ ಮತ್ತು ಬಿಹಾರದ ಬೋಧಗಯಾದಲ್ಲಿಯೂ ನೆಲೆಸಿಹೋದರು. ದಿ.ಗೋಪಾಲಶಾಸ್ತ್ರಿಯವರ ತಾತ ದಿ.ಸೂರ್ಯನಾರಾಯಣ ದೀಕ್ಷಿತರು ಮೈಸೂರಿನ ಕೃಷ್ಣಾಗಿರಿಯವರು. ಸತ್ಯನಾರಾಯಣ ಶಾಸ್ತ್ರಿಗಳು ಗೋಪಾಲಶಾಸಿಗಳ ತಂದೆ. ಸಾವಿತ್ರಿ ಶಾಸ್ತ್ರಿಯವರ ಅತ್ತೆಯೂ ಮೈಸೂರಿನ ಕೃಷ್ಣಾಗಿರಿಯವರು. ಅತ್ತೆಯವರ ತಂದೆ ಗಂಜಾಂ ಗುಂಡಪ್ಪನವರು ನವರತ್ನದ ವ್ಯಾಪಾರಿಗಳಾಗಿದ್ದು, ಮುತ್ತು, ರತ್ನ ವೈಡೂರ್ಯಗಳನ್ನು ಅರಮನೆಗೆ ಸಪ್ಲೈ ಮಾಡುತ್ತಿದ್ದರಂತೆ ಹಾಗೂ ಮೈಸೂರು ಮಹಾರಾಜರ ಆಪ್ತ ಸ್ನೇಹಿತರಾಗಿದ್ದರಂತೆ.

ಸಾವಿತ್ರಿ ಒಂಭತ್ತು ವರ್ಷದವಳಿದ್ದಾಗ, ಅಜ್ಜಿ–ನರಸಮ್ಮ ಅವರನ್ನು ಶಾಲೆಗೆ ಸೇರಿಸಲು ಮೈಸೂರಿನ 'ಜಯಮ್ಮ' ಎಂಬುವರ ಮನೆಗೆ ಕರೆದುಕೊಂಡು ಹೋಗಿದ್ದರಂತೆ. ಮುಂದೆ ಸತ್ಯನಾರಾಯಣ ಶಾಸ್ತ್ರಿಗಳು ಗೋಪಾಲಶಾಸ್ತ್ರಿ ಅವರಿಗೆ ಕರ್ನಾಟಕದಲ್ಲೇ ಹೆಣ್ಣು ಹುಡುಕುತ್ತಿದ್ದಾಗ ಮೈಸೂರಿನಲ್ಲಿದ್ದ ತಮ್ಮ ತಂಗಿಗೆ (ಜಯಮ್ಮ ಅವರ ತಂಗಿ) ಹೆಣ್ಣು ಹುಡುಕಲು ಹೇಳಿದ್ದರಂತೆ. ಜಯಮ್ಮನಿಗೆ ಆಗ ನೆನಪಾಗಿದ್ದು ಈ ಸಾವಿತ್ರಿ. ಕೋಲಾರದಲ್ಲಿ ಒಂದು ಗುರುತಿನ ಹುಡುಗಿ ಇದೆ, ತೋರಿಸುತ್ತೇನೆ ಎಂದು ಜಯಮ್ಮ ಸಾವಿತ್ರಿಯನ್ನು ತೋರಿಸಲು ಕರೆದೊಯ್ದರಂತೆ. ಕೋಲಾರದ ಅವರ ಮನೆ ತಲುಪುವಾಗ ಆಗಲೇ ಕತ್ತಲಾಗಿತ್ತು. ಆಗ ಸಾವಿತ್ರಿ ಅವರ ತಾಯಿ ಯಾರೋ ಬಂದಿದ್ದಾರೆ ಎಂದು ಆಗಂತುಕರನ್ನು ಲಾಂಧ್ರದ ಬೆಳಕಿನಲ್ಲಿ ಬರಮಾಡಿಕೊಂಡರಂತೆ. ಅವರಿಗೆ ಬಂದವರು ಯಾರೆಂದು ಗೊತ್ತಿರಲಿಲ್ಲ. ಬರುವ ಬಗ್ಗೆ ಅವರು ತಿಳಿಸಿಯೂ ಇರಲಿಲ್ಲ. ಆದರೆ ಜಯಮ್ಮನನ್ನು ಮೊದಲೇ ಅಜ್ಜಿಯೊಟ್ಟಿಗೆ ಹೋದಾಗ ಕಂಡಿದ್ದರಿಂದ ಅವರನ್ನು ತಟ್ಟನೇ ಗುರುತಿಸಿದ ಹುಡುಗಿ – ಸಾವಿತ್ರಿ ಅವರನ್ನು ಕಂಡು ಕಿಸಕ್ಕನೇ ನಕ್ಕಳಂತೆ. ಅವರ ಜೊತೆ ಬಂದಾತ , ಇವಳೇ ನನ್ನ ಸೊಸೆಯಾಗಿ ಬರುವ ಹುಡುಗಿ, ಈಗ ಕತ್ತಲಾಗಿದೆ, ನಾಳೆ ಬೆಳಕಿನಲ್ಲಿ ಬರುವ, ಎಂದು ಆಗಲೇ ಹುಡುಗಿಯನ್ನು ಒಪ್ಪಿಕೊಂಡು ಹೋದರಂತೆ. ಹೀಗೆ 16 ವರ್ಷದ ಸಾವಿತ್ರಿಗೆ ಗೋಪಾಲಶಾಸ್ತ್ರಿಯವರ ಕೈಹಿಡಿಯುವ ಸುಯೋಗ ಒದಗಿ ಬಂತು. 1946 ರ ಏಪ್ರಿಲ್ 26 ರಂದು ಸಾವಿತ್ರಿಯವರು ಗೋಪಾಲಶಾಸ್ತ್ರಿಯವರ ಕೈಹಿಡಿದರು.

ಮದುವೆಗೆ ಮೊದಲೇ 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ ಗೋಪಾಲಶಾಸ್ತಿಗಳು ಬಿಹಾರದ ಹಜಾರಿಬಾಗ್ ಜೈಲಿನಲ್ಲಿದ್ದರು. ಆಗಿನ ಯುವಕರು "ಬ್ರಿಟಿಷರ ಕಾಲದಲ್ಲಿ ಮದುವೆ ಆಗುವುದು ಬೇಡ, ಮಕ್ಕಳಾದರೆ ಅವರೂ ನಮ್ಮಂತೆ ಪರಾಧೀನರಾಗುತ್ತಾರೆ" – ಎಂದು ಭಾವಿಸಿ ಮದುವೆಯೇ ಬೇಡ ಎನ್ನುತ್ತಿದ್ದರಂತೆ. ಆದರೆ ಅವರ ತಂದೆ ತಾಯಿಗಳು ಹೀಗೆ ಬಿಟ್ಟರೇ ಮಗ ಸಂಸಾರಿಯಾಗುವುದಿಲ್ಲ ಎಂದು ಆಲೋಚಿಸಿ ಮದುವೆ ಮಾಡಿದರಂತೆ. ಮದುವೆಗೆ ಮೊದಲು ಶಾಸ್ತ್ರಿಗಳು ಕರ್ನಾಟಕವನ್ನು ಸುತ್ತಿದ್ದರಂತೆ.



ಉಪರಾಷ್ಟ್ರಪತಿ ಬಿ.ಡಿ. ಜತ್ತಿ ಮತ್ತು ಶ್ರೀಮತಿ ಜತ್ತಿಯವರೊಡನೆ

## ಭಾಷೆ – ಶ್ರೀಮತಿ ಸಾವಿತ್ರಿ ಶಾಸ್ತ್ರಿ

1955ರಲ್ಲಿ ಪಂ. ನೆಹರೂ ಅವರು ಗೋಪಾಲಶಾಸ್ತ್ರಿಗಳನ್ನು ಭಾರತ ಸೇವಕ ಸಮಾಜದಲ್ಲಿ ಕೆಲಸಮಾಡಲು ಬಿಹಾರದಿಂದ ದೆಹಲಿಗೆ ಕರೆಸಿಕೊಂಡರಂತೆ. ಆಗ ಸಾವಿತ್ರಿ ಅವರು ಮಕ್ಕಳೊಂದಿಗೆ ಗಯಾದಲ್ಲೇ ಇದ್ದರು. 1956 ರಲ್ಲಿ ಗೋಪಾಲಶಾಸ್ತ್ರಿಗಳು ಎರಡು ತಿಂಗಳು ಮಡದಿ ಮಕ್ಕಳನ್ನು ದೆಹಲಿ ಸುತ್ತಾಡಿಸಿ ಕರೆತರುತ್ತೇನೆ ಎಂದು ತಂದೆತಾಯಿಗಳಲ್ಲಿ ಅಪ್ಪಣೆ ಪಡೆದು ಕುಟುಂಬವನ್ನು ದೆಹಲಿ ಕರೆತಂದರಂತೆ. ತತ್ಕಾಲಕ್ಕೆ ಎಲ್ಲೋ ಬೇರೆ ಕಡೆ ಬಾಡಿಗೆ ಮನೆಯಲ್ಲಿ ತಂಗಿದ್ದರಂತೆ. ಆಮೇಲೆ ಸುಜಾನ್ ಸಿಂಗ್ ಪಾರ್ಕಿನ ಭವ್ಯ ಬಂಗಲೆಯಲ್ಲಿ ವಸತಿ ಹಂಚಿಕೆಯಾಗಿ ಎರಡು ತಿಂಗಳು ಯಾತ್ರಿಕರಾಗಿ ಬಂದವರು ಇಲ್ಲಿಯೇ ನೆಲೆಸಿಹೋದರು.

1958ರಲ್ಲಿ ಗೌಹಾಟಿಯಲ್ಲಿ ದಂಗೆ ಪ್ರಾರಂಭವಾಯಿತು. ಆಗ ಶಾಸ್ತ್ರಿ ಅವರು ಆಲ್ ಇಂಡಿಯಾ ಯೂತ್ ಕಾಂಗ್ರೆಸ್ಸಿನ ಸೆಕ್ರೆಟರಿಯಾಗಿದ್ದರು. ಹದಿನೈದು ದಿನ ಗೌಹಾಟಿ, ಹದಿನೈದು ದಿನ ದಿಲ್ಲಿ ಹೀಗೆ ಓಡಾಡಿಕೊಂಡಿದ್ದರಂತೆ. ಅಂಥ ಸಮಯದಲ್ಲಿ ಮಕ್ಕಳನ್ನು ಶಾಲೆಗೆ ಕಳಿಸಿ, ಮನೆಯನ್ನು, ಮನೆಗೆ ಬರುವ ಹೋಗುವವರನ್ನು ಹಾಗೂ ಸಂಸಾರವನ್ನು ಲವಲವಿಕೆಯಿಂದ ಸಾವಿತ್ರಿ ಅವರೇ ನಿಭಾಯಿಸುತ್ತಿದ್ದರಂತೆ. ಆಗಿನ ಮನರಂಜನೆಗೆ ದರಿಯಾಗಂಜ್, ಚಾಂದನೀಚೌಕ್, ರೀಗಲ್ ನಲ್ಲಿ ಸಿನೆಮಾ ಬರುತ್ತಿದ್ದವು. ಎತ್ತಿನ ಗಾಡಿಯಲ್ಲಿ ಓಣಿ ಓಣಿಗೆ ಹೋಗಿ ಇಂಥಲ್ಲಿ ಸಿನೆಮಾ ಇದೆಯೆಂದು ಅನೌನ್ಸ್ ಮಾಡುತ್ತಿದ್ದರಂತೆ. ಆಗ ಜನಸಂಖ್ಯೆಯೇ ಕಡಿಮೆ ಇತ್ತು. ಮೋಟಾರು ಬಸ್ಸುಗಳೂ ಇದ್ದಿಲ್ಲ. ಕೆಲವೆಡೆಯೆಲ್ಲ ಕಾಲ್ನಡಿಗೆಯಲ್ಲೇ ಓಡಾಡಬೇಕಿತ್ತು. ಹಬ್ಬಕ್ಕೆ ಹೂವು ಇತ್ಯಾದಿ ತರಲು ಚಾಂದನೀಚೌಕ್ ಗೆ ನಡೆದುಕೊಂಡೇ ಹೋಗುತ್ತಿದ್ದರು. ರಿಕ್ಷಾಗಳಿದ್ದವು. ಅವಕ್ಕಾದರೆ ದುಡ್ಡು ಕೊಟ್ಟು ಹೋಗಬೇಕು. ಈಗಿನ ಐತಿಹಾಸಿಕ ಪ್ರಸಿದ್ಧಿಯ ರಾಮಲೀಲಾ ಮೈದಾನದಲ್ಲಿ ದೇವಸ್ಥಾನದ ಹೆಸರಿಗೆ ಒಂದು ಪುಟ್ಟ ಗುಡಿಸಲಿತ್ತಂತೆ. ಅಷ್ಟೇ. ಈಗಿನ ಸೌತ್ ಎಕ್ಸ್‌ಟೆನ್ಷನ್ ಪೂರಾ ಕಾಡು. ದಯಾಲ್ ಸಿಂಗ್ ವರೆಗೆ ಮಾತ್ರ ದಿಲ್ಲಿ. ಮುಂದೆಲ್ಲ ಕಾಡು. ಆಗಿನ್ನೂ ನವ ದೆಹಲಿ ಈಗಿನಂತೆ ಬೆಳೆದು ನಿಂತಿರಲಿಲ್ಲ. ಈಗ ದೆಹಲಿ ಕನ್ನಡ ಶಾಲೆಯಿದ್ದ ಜಾಗದಲ್ಲಿ ಒಂದು ನಾಲಾ ಇತ್ತಂತೆ. ಅದನ್ನು ದಾಟಿಕೊಂಡು ಸರದಾರ್ ಪಟೇಲ್ ಸ್ಕೂಲಿನಲ್ಲಿ ನರ್ಸರಿಯಲ್ಲಿದ್ದ ಮಕ್ಕಳನ್ನು ಕರೆತರಲು ಸಾವಿತ್ರಿ ಅವರು ಹೋಗುತ್ತಿದ್ದರಂತೆ. ಆವಾಗಲೇ ತೆಲುಗು ಶಾಲೆ, ತಮಿಳು ಶಾಲೆಗಳು ಅಸ್ತಿತ್ವಕ್ಕೆ ಬಂದಿದ್ದವು.

ಕನ್ನಡ ಶಾಲೆಯ ಸ್ಥಾಪಕರಾದ ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್ ಅವರ ಭಾವ ಆಗ ಬಿಹಾರದ ಗವರ್ನರ್ ಆಗಿದ್ದು, ಗೋಪಾಲ ಶಾಸ್ತ್ರಿ ಅವರಿಗೆ ತುಂಬಾ ಆಪ್ತರಾಗಿದ್ದರು. ಅವರ ಮೂಲಕ ಕೃಷ್ಣಮೂರ್ತಿಯವರ ಸ್ನೇಹವೂ ಆಳವಾಯಿತು. ಇವರೆಲ್ಲ ಸೇರಿ ಕನ್ನಡಿಗರ ಮಕ್ಕಳಿಗೆ ಒಂದು ಶಾಲೆಯನ್ನು ತೆರೆಯಲು ಯೋಚಿಸಿದರು. 1961 ರಲ್ಲಿ LND ಯಿಂದ ಈ ಶಾಲೆಗಾಗಿ ಆಗಲೇ ಭೂಮಿ ಹಂಚಿಕೆಯಾಗಿತ್ತಂತೆ. ಒಂದು ಶುಭದಿನದಂದು ಶ್ರೀಮತಿ ಮತ್ತು ಶ್ರೀ ಚಂದ್ರಶೇಖರ್, ಗೋಪಾಲಶಾಸ್ತ್ರಿ ದಂಪತಿಗಳು ಮತ್ತು ಎ. ಸೀತಾರಾಮಯ್ಯ ಎಂಬುವರು ಸೇರಿ ಐದು ಇಟ್ಟಿಗೆ ಇಟ್ಟು ಭೂಮಿಪೂಜೆ ಮಾಡಿದ್ದನ್ನು ಸಾವಿತ್ರಿ ಶಾಸ್ತ್ರಿಯವರು ಅತ್ಯಂತ ಪ್ರೀತಿಯಿಂದ ನೆನೆಯುತ್ತಾರೆ. ಅಲ್ಲಿಯೇ ಶ್ರೀಮತಿ ಚಂದ್ರಶೇಖರ್ ಅವರು ಚಹಾ ತಯಾರಿಸಿದರಂತೆ. ಖಾನ್ ಮಾರ್ಕೆಟ್ಟಿನಿಂದ ಸಿಹಿ ತಂದು ಎಲ್ಲರಿಗೂ ಹಂಚಿದರಂತೆ. ಎರಡು ವರ್ಷದಲ್ಲಿ ಕನ್ನಡ ಶಾಲೆ ರಾಜಧಾನಿಯ ಹೃದಯದಲ್ಲಿ ತಲೆಯೆತ್ತಿ ನಿಂತಿತು–ಎಂದು ಸಾವಿತ್ರಿಯವರು ಹೃದಯತುಂಬಿ ಆ ಘಟನೆಯನ್ನು ನೆನಪಿಸಿಕೊಳ್ಳುತ್ತಾರೆ.



ಶ್ರೀಮತಿ ಇಂದಿರಾ ಗಾಂಧಿ ಮತ್ತು ಶಂಕರ್‌ದಯಾಳ್ ಶರ್ಮಾ ಅವರೊಡನೆ

1966 ರಲ್ಲಿ ತಮ್ಮ ಮಕ್ಕಳಾದ ಅರುಣಾ ಮತ್ತು ನೀರಜಾ ರನ್ನು ಕನ್ನಡಶಾಲೆಗೆ ಸೇರಿಸಿದರಂತೆ. ಆಗ ಗುರುರಾಜ ರಾವ್ ಎಂಬುವರು ಪ್ರಿನ್ಸಿಪಾಲರಾಗಿದ್ದರು. ತುಂಬಾ ಒಳ್ಳೆಯ ರೀತಿಯಿಂದ ಶಾಲೆಯನ್ನು ನಡೆಸಿಕೊಂಡು ಹೋಗುತ್ತಿದ್ದರು. ಸಾವಿತ್ರಿ ಶಾಸ್ತ್ರಿ ಅವರು ಶಾಲೆಯ ಎಲ್ಲ ಮೀಟಿಂಗ್ ಗಳಿಗೂ ಹೋಗುತ್ತಿದ್ದರಂತೆ. ಸುಜಾನ್ ಸಿಂಗ್ ಪಾರ್ಕ್ ನ ಅವರ ಮನೆ ಕಿಟಕಿಯಿಂದ ಶಾಲೆ ಕಾಣುತ್ತಿತ್ತು ಆಗ. ಮನೆಗೆಲಸ ಮಾಡಿಕೊಳ್ಳುತ್ತಲೇ ಶಾಲೆಯ ಮಕ್ಕಳ ಮೇಲೊಂದು ಕಣ್ಣಿಟ್ಟಿರುತ್ತಿದ್ದರು. ಯಾರಾದರೂ ಮಕ್ಕಳು ಶಾಲೆಯ ಹೊರಗಡೆ ತಿರುಗಾಡುತ್ತಿದ್ದರೆ ತಕ್ಷಣ ಶಾಲೆಗೆ ಫೋನ್ ಮಾಡಿ–'ನೋಡಿ ಮಕ್ಕಳು ಹೊರಗಡೆ ಇದ್ದಾರೆ, ಒಳಗಡೆ ಕರೆಸಿಕೊಳ್ಳಿ' ಎಂದು ಎಚ್ಚರಿಸುತ್ತಿದ್ದರಂತೆ. ತಾಯಿ ಕಣ್ಣಲ್ಲಿ ಕಣ್ಣಿಟ್ಟು ಮಕ್ಕಳನ್ನು ಕಾಯುವಂತೆ ಸಾವಿತ್ರಿ ಮಕ್ಕಳನ್ನು ಕಾದಿದ್ದಾರೆ ಎಂದರೂ ತಪ್ಪಿಲ್ಲ. ಅಂಥ ಕಾಳಜಿ– ಕಳಕಳಿಯ ಜೀವ ಅವರದು. ಹೀಗೆ ಈ ಕನ್ನಡ ಶಾಲೆಯ ಭೂಮಿ ಪೂಜೆಯಿಂದ ಹಿಡಿದು ಇಂದಿನ ದಿನದ ವರೆಗೂ ಎಲ್ಲ ಘಟ್ಟಗಳಲ್ಲಿ ಅವರು ಶಾಲೆಯ ಶ್ರೇಯೋಭಿವೃದ್ಧಿಗಾಗಿ ಹಗಲಿರುಳು ಚಿಂತಿಸಿದವರು. ಅದಕ್ಕಾಗಿ ಸತತವಾಗಿ ದುಡಿದವರು. ಕನ್ನಡ ಶಾಲೆಯ ಐವತ್ತು ವರ್ಷಗಳ ಏಳು–ಬೀಳು, ಬೆಳವಣಿಗೆ ಎಲ್ಲದರ ಪ್ರತ್ಯಕ್ಷ ಸಾಕ್ಷಿಯಾಗಿ ಶಾಲೆಯ ಬಗ್ಗೆ ಅತ್ಯಂತ ಅಭಿಮಾನ ಮತ್ತು ಪ್ರೀತಿಯುಳ್ಳ ಸಾವಿತ್ರಿ ಅವರು "ಕನ್ನಡಿಗರು ಎಲ್ಲ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಶಾಲೆಯನ್ನು ಬೆಳೆಸಬೇಕು. ಈಗಲೂ ಶಾಲೆ ಬೆಳೆದರೆ ಸಂತೋಷ ಪಡ್ತೀನಿ" ಎಂದು ಭಾವಪೂರ್ಣವಾಗಿ ಹೇಳುತ್ತಾರೆ. ಅಂಥ ಅಭಿಮಾನ ಅವರಿಗೆ ಶಾಲೆಯ ಮೇಲೆ.

1962 ರಲ್ಲಿ ಈಗಿನ ತೀಸ್ ಜನವರಿ ಮಾರ್ಗ್ ಇದ್ದ ಜಾಗದಲ್ಲಿ ಆಗಿನ ಹೋಟೆಲ್ ಕ್ಲಾರಿಜಸ್ ಹಿಂಭಾಗ ಒಂದು ಖಾಲಿ ಜಾಗೆಯಿತ್ತಂತೆ. ಅಲ್ಲಿ ಅಗಸರೆಲ್ಲ ಬಟ್ಟೆ ಒಣ ಹಾಕುತ್ತಿದ್ದರು. ಆಗಿನ ಹೌಸಿಂಗ್ ಮಿನಿಸ್ಟರ್ ಆಗಿದ್ದ ಮೆಹರ್‌ಸಿಂಗ್ ಖನ್ನಾ ಅವರ ಸಹಾಯದಿಂದ ಈ ಜಾಗೆಯನ್ನು ಪಡೆದುಕೊಂಡು, 'ಜ್ಞಾನ ಮಂದಿರ ಸೊಸೈಟಿ' ಶಾಲೆಯನ್ನು ಮರದ ಕೆಳಗೇ ಪ್ರಾರಂಭಿಸಿದರಂತೆ. ಅದು ಕೆಳವರ್ಗದ ಬಡ ಮಕ್ಕಳಿಗಾಗಿ. ಮನೆ ಮನೆಗೆ ಹೋಗಿ ಪೋಷಕರಿಗೆ ಶಾಲೆಗೆ ಕಳಿಸಿ ಎಂದು ತಿಳಿಹೇಳಿ ಬಡ ಮಕ್ಕಳನ್ನು ಒಂದುಗೂಡಿಸಿದರಂತೆ. ಅಲ್ಲೇ ನಂಬರ್ 26 ಔರಂಗಜೇಬ್ ರಸ್ತೆಯಲ್ಲಿದ್ದ ಶ್ರೀಮತಿ ಕೇಜರಿವಾಲ್ ಕುಟುಂಬದ ಸದಸ್ಯರು, ಸಾವಿತ್ರಿ ಶಾಸ್ತ್ರಿ, ಗೋಪಾಲ ಶಾಸ್ತ್ರಿ, ಮತ್ತಿತರ ಸಮಾಜಸೇವಾ ಮನೋಭಾವದ ಹಿರಿಯರೆಲ್ಲ ಸೇರಿ ಕೈಯಿಂದ ಹಣ ಸಂಗ್ರಹಿಸಿ, ಮಕ್ಕಳಿಗೆ ಸ್ಲೇಟು, ಬಳಪ, ಪುಸ್ತಕ, ಪೆನ್ಸಿಲ್, ಯೂನಿಫಾರ್ಮ್, ಶೂ, ಇತ್ಯಾದಿಗಳ ವ್ಯವಸ್ಥೆ ಮಾಡಿದರಂತೆ. ಮಕ್ಕಳನ್ನು ಸ್ವಚ್ಛವಾಗಿಡಲು ಅಲ್ಲೇ ಅವುಗಳಿಗೆ ಕೈಯಾರೆ ಸ್ನಾನಮಾಡಿಸುತ್ತಿದ್ದರಂತೆ. ಛಳಿಗಾಲದಲ್ಲಿ ಮಕ್ಕಳಿಗೆ ಕಷ್ಟವಾಗುತ್ತದೆಂದು ಸಾವಿತ್ರಿಯವರು ತಮ್ಮ ಮನೆಯಿಂದ ಹಳೇ ನೀರು ಕಾಯಿಸುವ ಬಾಯ್ಲರನ್ನು ತೆಗೆದುಕೊಂಡು ಹೋಗಿ ಇಟ್ಟಿದ್ದರಂತೆ. ಮನೆಯಲ್ಲಿ ತಿನ್ನಲು ಉಡಲು ಇಲ್ಲದ ಬಡವರು ಮಕ್ಕಳನ್ನು ಹೇಗೆ ಶಾಲೆಗೆ ಕಳಿಸಿಯಾರು–ಮಕ್ಕಳು ಶಾಲೆಗೆ ಬರಲಿ ಎಂಬ ಸದುದ್ದೇಶದಿಂದ ಮಕ್ಕಳಿಗೆ ತಿಂಡಿ ತಿನಿಸುಗಳನ್ನು ಮನೆಯಿಂದಲೇ ಸರದಿಯಂತೆ ಒಬ್ಬರು ಮಾಡಿಕೊಂಡು ಹೋಗುತ್ತಿದ್ದರಂತೆ. ನಂತರ ಅಲ್ಲೇ ಮರದ ಕೆಳಗೆ ರವೆ ಹಲ್ವ ಮಾಡತೊಡಗಿದರಂತೆ. ಅರಳಿ ಮರದ ಎಲೆಗಳನ್ನು ತೊಳೆದು ಅದರಲ್ಲೇ ಬಡಿಸುತ್ತಿದ್ದರಂತೆ. ಮುಂದೆ ತಮ್ಮ ತಮ್ಮಲ್ಲೇ ದುಡ್ಡು ಹಾಕಿಕೊಂಡು ತಟ್ಟೆ, ಪ್ಲೇಟು, ಗ್ಲಾಸು, ಬಕೆಟ್ಟು ಹೀಗೆ ಎಲ್ಲ ವ್ಯವಸ್ಥೆಯನ್ನೂ ಮಾಡಿದರಂತೆ. ಹೀಗೆ ಪ್ರಾರಂಭವಾದ 'ಜ್ಞಾನ ಮಂದಿರ ಸೊಸೈಟಿ' ವಿದ್ಯಾಮಂದಿರ ಈಗ ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ ನೀಡಿದೆ. ಶ್ರೀಮಂತವಾಗಿಯೂ ಬೆಳೆದಿದೆ. ಮುಂದೆ 1988 ರಲ್ಲಿ ಶಾಸ್ತ್ರಿ ದಂಪತಿಗಳು ಅಮೇರಿಕೆಗೆ ಹೋಗಬೇಕಾಗಿ ಬಂದಾಗ ಶಾಲೆಯ ವ್ಯವಹಾರದಲ್ಲಿ ಇತರರಿಗೆ ತಮ್ಮಿಂದ ತೊಂದರೆಯಾಗಬಾರದು ಎಂದು ಜ್ಞಾನ ಮಂದಿರ ಸೊಸೈಟಿಯ ಆಡಳಿತ ಮಂಡಳಿಗೆ ರಾಜೀನಾಮೆ ನೀಡಿದರಂತೆ. ಆಗಲೇ LND ಇನ್ನೊಂದು ಶಾಲೆಯ ನಿರ್ಮಾಣಕ್ಕಾಗಿ ಮಸ್ಜಿದ್ ಮೋಡ್ (ಗ್ರೇಟರ್ ಕೈಲಾಶ್ ಭಾಗ ಎರಡರಲ್ಲಿ) ಹತ್ತಿರದ ವಿಶಾಲ ಜಮೀನನ್ನು ಕೇವಲ 9000 ರೂ.ಗೆ ಹಂಚಿಕೊಟ್ಟಿತ್ತಂತೆ. ಆದರೆ ಶಾಸ್ತ್ರೀ ಅವರ ರಾಜೀನಾಮೆ



ಶ್ರೀಮತಿ ಇಂದಿರಾ ಗಾಂಧಿ ಹಾಗೂ ಶೀಲಾ ದೀಕ್ಷಿತ್ ಅವರ ಅತ್ತೆ-ಮಾವರೊಡನೆ

ನಂತರ ಕೇಜರೀವಾಲ್ ಅವರು ಆ ಭೂಮಿಯನ್ನು ಮಾರಿದರಂತೆ. ಹೀಗೆ ಕೋಟ್ಯಾಂತರ ಬೆಲೆಬಾಳುವ ಜಮೀನು ಅವರ ಕಣ್ಣೆದುರಿಗೇ ಬೇರೆಯವರ ಕೈವಶವಾಯಿತು. ಸ್ವಲ್ಪ ಜಾಣತನ ಮಾಡಿದ್ದರೆ ನಾವೇ ಖರೀದಿಸಿ ಇನ್ನೊಂದು ಕನ್ನಡ ಶಾಲೆಯನ್ನು ಕಟ್ಟಬಹುದಿತ್ತು ಎಂದು ಈಗಲೂ ಸಾವಿತ್ರಿ ಶಾಸ್ತ್ರಿ ಮರುಗುತ್ತಾರೆ, ವಿಷಾದದಿಂದ ನೆನೆಯುತ್ತಾರೆ. ಅಂಥ ಪ್ರಾಮಾಣಿಕ, ಸಾತ್ವಿಕ ಬದುಕು ನಡೆಸಿದ ಸರಳ ಹೃದಯವಂತರು.

ದೇಶಕ್ಕೆ ಸ್ವಾತಂತ್ರ್ಯ ದೊರೆಯುವ ಮುನ್ನವೇ ಉತ್ತರಭಾರತ ಸೇರಿದ ಸಾವಿತ್ರಿ ಅವರನ್ನು ಗಾಢವಾಗಿ ಪ್ರಭಾವಿಸಿದ್ದು ಸ್ವಾತಂತ್ರ್ಯ ಹೋರಾಟಗಾರ ಪತಿ. ಮನೆಗೆ ಬರು-ಹೋಗುವ ಅಪ್ರತಿಮ ದೇಶಭಕ್ತ ಹೋರಾಟಗಾರರು. ಹೀಗೆ ಸಾವಿತ್ರಿ ಅವರ ವ್ಯಕ್ತಿತ್ವ ನಾನಾ ರೀತಿಯಲ್ಲಿ ವಿಕಸಿತವಾಯಿತೆಂದರೆ ಅತಿಶಯೋಕ್ತಿಯೇನಲ್ಲ. ಅವರಲ್ಲಿ ಸೇವಾ ಮನೋಭಾವನೆ, ನಾಡು ನುಡಿಯ ಬಗ್ಗೆ ಪ್ರೇಮ, ಅಪಾರ ಅಭಿಮಾನವಿದೆ. ಈ ವಯಸ್ಸಿನಲ್ಲೂ ಬೇಸರವಿಲ್ಲದೇ ಬಂದು ಹೋಗುವವರನ್ನು ಅತ್ಯಂತ ಆದರದಿಂದ ಸತ್ಕರಿಸುತ್ತಾರೆ. ಶ್ರೀಮತಿ ಇಂದಿರಾ ಗಾಂಧಿ ಅವರು ಯೂತ್ ಕಾಂಗ್ರೆಸ್ಸಿನ ಸದಸ್ಯೆಯಾಗಿದ್ದಾಗ , ಸಾವಿತ್ರಿ ಅವರೂ ಶ್ರೀಮತಿ ಕೆ.ಸಿ. ರೆಡ್ಡಿ, ಅರುಣಾ ಅಸಫ್ ಅಲಿ, ಅವರೆಲ್ಲ ಇಂದಿರಾ ಅವರ ಜತೆ ಸಮಾಜಸೇವೆಗಾಗಿ ಹೋಗುತ್ತಿದ್ದರಂತೆ. 1962 ರಲ್ಲಿ ಚೀನಾ ಯುದ್ಧ ನಡೆದು ಅನೇಕ ನಿರಾಶ್ರಿತರು ಶಿಬಿರಗಳಲ್ಲಿ ನೆಲೆಯೂರಿದಾಗ ಅಲ್ಲೆಲ್ಲ ಈ ಮಹಿಳೆಯರು ಹೋಗಿ ಸುಖ-ದುಃಖ ವಿಚಾರಿಸಿಕೊಳ್ಳುತ್ತಿದ್ದಲ್ಲದೇ, ಅಕ್ಕಿ, ಆಹಾರ, ಸೋಪು, ಔಷಧ, ಬಟ್ಟೆ ಬರೆ ಇತ್ಯಾದಿಗಳನ್ನು ಮನೆ ಮನೆಯಿಂದ ಸಂಗ್ರಹಿಸಿ ಶಿಬಿರಗಳಲ್ಲಿ ಹಂಚುತ್ತಿದ್ದರಂತೆ. ಛಳಿಗಾಲದಲ್ಲಿ ಸ್ವೆಟರ್ ಹೆಣೆದು ಕೊಡುತ್ತಿದ್ದರಂತೆ ಶಿಬಿರದ ನಿರಾಶ್ರಿತರಿಗೆ. ಇದಲ್ಲದೇ 1970ರ ಭಾರತ-ಪಾಕಿಸ್ತಾನ ಯುದ್ಧದ ಸಮಯದಲ್ಲೂ ಸಾಕಷ್ಟು ಸೇವೆಯನ್ನು ಮಾಡಿದ್ದಾರೆ. ಪತಿಯ ಎಲ್ಲ ಹೋರಾಟಗಳಿಗೆ ಜೊತೆಗೂಡಿ ಸಹಕರಿಸಿದ ಇವರದು ಅನುಪಮ ದಾಂಪತ್ಯ ಬದುಕು.

**ಮರೆಯಲಾರದ ಘಟನೆಗಳು :** ನೇರ ನಡೆನುಡಿಯ ಸಾವಿತ್ರಿ ಶಾಸ್ತ್ರಿ ಅವರಿಗೆ ಸಮಾಜಸೇವೆಯ ಜೊತೆಗೆ ಮೋಸ ಅನ್ಯಾಯ ಮಾಡುವವರ ವಿರುದ್ಧ ಸಿಡಿದೇಳುವ ದಿಟ್ಟತನವೂ ಇದೆ. ಒಮ್ಮೆ ಖಾನ್ ಮಾರ್ಕೆಟಿನಲ್ಲಿ 'ರೇಶನ್ ಅಂಗಡಿ'ಗೆ ಹೋಗಿದ್ದರಂತೆ. ಜನ ರೇಶನ್ ಪಡೆಯಲು ಮುತ್ತಿದ್ದರು. ತುಂಬಾ ಉದ್ದದ ಸಾಲಿತ್ತು. ಅಂಗಡಿಯವ ಪರಿಚಯವಿದ್ದುದರಿಂದ ಇವರು ನೇರವಾಗಿ ಅಂಗಡಿಯ ಒಳಗೇ ಹೋದರಂತೆ. ಆಗ ಒಬ್ಬ ಬಡವ ಗೋಧಿಯಲ್ಲಿ ಕಲ್ಲು-ಕಬ್ಬಿಣದ ತುಂಡುಗಳಿದ್ದವೆಂದು ಗೋಳಿಡುತ್ತಿದ್ದನಂತೆ.ರೇಶನ್ ಅಂಗಡಿಯವ ಅಕ್ಕಿ-ಗೋಧಿಯಲ್ಲಿ ಕಲ್ಲು-ಕಬ್ಬಿಣದ ತುಂಡು ಬೆರೆಸಿದ್ದುದನ್ನು ಗಮನಿಸಿ ಸಾವಿತ್ರಿ ಅವರು ಅಲ್ಲೇ ಅದನ್ನು ಖಂಡಿಸಿ, ಅವನಿಗೆ ಚೆನ್ನಾಗಿ ಛೀಮಾರಿ ಹಾಕಿದರಂತೆ. 'ನಿಮ್ಮಂಥವರು ಹೀಗೆಲ್ಲ ಮಾಡಿದರೆ ಬಡವರು ಬದುಕುವುದೆಂತು-ನಿನ್ನ ಅಂಗಡಿಯನ್ನೇ ಮುಚ್ಚಿಸುತ್ತೇನೆ, ಏನಂತ ತಿಳಿದಿದ್ದೀ'-ಎಂದೆಲ್ಲ ಕೂಗಾಡಿದರಂತೆ. ಎಲ್ಲ ಸಂಸದರು, ಪಾರ್ಲಿಮೆಂಟಿನ ಎಲ್ಲ ಮಂತ್ರಿಗಳು ಗೊತ್ತಿದ್ದವರೇ ಇದ್ದು, ಈ ವಿಷಯ ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಿ, ಆ ರೇಶನ್ ಅಂಗಡಿಯವನ ಮೇಲೆ ಸೂಕ್ತ ಕ್ರಮ ಕೈಗೊಂಡರಂತೆ. ಈ ಘಟನೆಯನ್ನು ವಿವರಿಸುತ್ತ ಶಾಸ್ತ್ರಿ ಅವರು-ಆಗ ಜನ ಲಕ್ಷಾಧಿಪತಿಯಾಗಿದ್ದರು. ಈಗಿನಂತೆ ಕೋಟ್ಯಾಧೀಶರಾಗಿರಲಿಲ್ಲ, ನೀತಿವಂತರಾಗಿದ್ದರು, ಕರ್ತವ್ಯ ನಿಷ್ಠರಾಗಿದ್ದರು, ಈಗಿನಂತೆ ಭ್ರಷ್ಟರಾಗಿರಲಿಲ್ಲ-ಎಂದು ಈಗಿನ ಭ್ರಷ್ಟ ವ್ಯವಸ್ಥೆ, ಎಲ್ಲೆಲ್ಲೂ ಅರಾಜಕತೆಯ ಪರಮಾವಧಿ ಕುರಿತು ವಿಷಾದದಿಂದ ಹೇಳಿದರು.

**ಸವಿನೆನಪುಗಳು :** ಒಮ್ಮೆ ಪಂಡಿತ ನೆಹರೂ ಅವರ ಹುಟ್ಟು ಹಬ್ಬದಂದು ದಿ.ಗೋಪಾಲಶಾಸ್ತ್ರಿ ಮತ್ತು ಸಾವಿತ್ರಿ ಶಾಸ್ತ್ರೀ ಮಕ್ಕಳೊಂದಿಗೆ ಕಮಲದ ಹೂ ತೆಗೆದುಕೊಂಡು ನೆಹರೂ ಮನೆಗೆ ಹೋಗಿದ್ದರಂತೆ. ಆಗ ನೆಹರೂ ಪ್ರೀತಿಯಿಂದ ಬರಮಾಡಿಕೊಂಡು, ತಂಗಿ ವಿಜಯಲಕ್ಷ್ಮಿ ಪಂಡಿತ ಅವರಿಗೆ "ದೇಖೋ ಕಿತನಾ ಅಚ್ಛಾ ಫೂಲ್ ಹೈ" ನೀರಲ್ಲಿ ಹಾಕಿಡು ಅಂತ ಅವರಿಗೆ ಕೊಟ್ಟರಂತೆ. ಹೀಗೆ ಆಗಿನ ಜನ ನಾಯಕರುಗಳಿಗೆ ಯಾವ ಸುರಕ್ಷಾ ಸಿಬ್ಬಂದಿಗಳ ಅಗತ್ಯವಿದ್ದಿಲ್ಲ. ಬೇಸಿಗೆಗೆ ನೆಹರೂ ವರಾಂಡದಲ್ಲೇ ಮಲಗುತ್ತಿದ್ದರು. ಆಗ ಈಗಿನ ಪಾಲಿಕಾ ಬಜಾರ್ ಇದ್ದ ಜಾಗೆಯಲ್ಲಿ ಅವರ 'ಭಾರತ ಸೇವಕ ಸಮಾಜ'ದ ಕಛೇರಿಯಿರುತ್ತಿತ್ತು. ಅಲ್ಲಿಗೆ ಹಾಗೇ ನಡೆದುಕೊಂಡೇ ಬಂದು ಹೋಗುತ್ತಿದ್ದರಂತೆ. ಗುಲ್ಜಾರಿ ಲಾಲ್ ನಂದಾ ಭಾರತ ಸೇವಕ ಸಮಾಜದ ಅಧ್ಯಕ್ಷರಾಗಿದ್ದರು ಆಗ, ಅನೇಕ ಭೋಜನ ಕೂಟ, ಸಭೆ, ಸಮಾರಂಭಗಳಿಗೆ ಎಲ್ಲ ಹಿರಿಯ ದೇಶಭಕ್ತ ನೇತಾರರೊಡನೆ ಭಾಗವಹಿಸುತ್ತಿದ್ದುದನ್ನು ಸಾವಿತ್ರಿ ಶಾಸ್ತ್ರಿ ಅವರು ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಾರೆ.

ಇತಿಹಾಸದುದ್ದಕ್ಕೂ ದೆಹಲಿ ವಿದೇಶಿಯರನ್ನು ಆಕರ್ಷಿಸುತ್ತಲೇ ಬಂದಿದೆ. ಹದಿನಾರನೇ ಶತಮಾನದಲ್ಲಿ ಯುರೋಪಿನ ವಸಾಹತುಶಾಹಿ ಹಿಂದುಸ್ತಾನವನ್ನು ಆಕ್ರಮಿಸಿತೋ ಅಂದಿನಿಂದ ಆಧುನಿಕತೆಯೂ ಪಾದಾರ್ಪಣೆ ಮಾಡಿತು. ನಾವೀಗ ತಿನ್ನುವ ಚೈನೀಸ್ ಫುಡ್ ಹೊಸದೇನಲ್ಲ. ಆಗಲೂ ಇತ್ತು. 1960ರ ಕಾಲದಲ್ಲೂ ಸಾವಿತ್ರಿ ಶಾಸ್ತ್ರಿ ಮತ್ತು ಅವರ ಸ್ನೇಹಿತೆ ಶ್ರೀಮತಿ ಕೇಜರಿವಾಲ್ ಇಬ್ಬರೂ ಕನಾಟ್ ಪ್ಲೇಸಿನ ಮಿಕಾಡೋ ರೆಸ್ಟುರಾಂಟಿನಲ್ಲಿ ಚೈನೀಸ್ ಫ್ರೈಡ್ ರೈಸ್, ಚಿಲ್ಲಿ ಸಾಸ್ ಮಂಚೂರಿ ತಿನ್ನಲು ಹೋಗುತ್ತಿದ್ದರಂತೆ ! (ಅಬ್ಬಾ ಎಂದುಕೊಂಡೆ) ನಮ್ಮ ಅಮ್ಮಂದಿರು ಮಾಡಿ ಹಳೆಯದಾದ ಹೇರ್ ಸ್ಟೈಲ್, ಅನೇಕ ರೀತಿಯ ಪೋಲಕಾ, ಬ್ಲೌಸು ವಿನ್ಯಾಸಗಳೆಲ್ಲ ನಮಗೀಗ ಫ್ಯಾಶನ್ ಆಗಿವೆ ಅಷ್ಟೆ. ಅಂತೆಯೇ ಚೈನೀಸ್ ಫುಡ್.

ರಾಜಧಾನಿಯ ಎಲ್ಲ ಹಿರಿಯ ನಾಗರಿಕರು ಒಂದೆಡೆ ಕುಳಿತು ಸಮಯ ಕಳೆಯಲೆಂದು ಜಗ್ ಪ್ರವೇಶ್ ಚಂದ್ರ ಎಂಬುವರು 'ಕಾಫೀ ಹೌಸ್' ತೆರೆದರಂತೆ. ಹೊಸ ದೆಹಲಿಯ ಹಳೆ ನೆನಪುಗಳಲ್ಲಿ ಕಾಫೀ ಹೌಸ್ ಕೂಡ ಒಂದು ಅಭೂತಪೂರ್ವ ನೆನಪು. ಈಗಲೂ ಇದೆ. 'ಕಾಫೀ ಹೌಸ್' ಗೆ ಅದರದೇ ಆದ ಒಂದು ಐತಿಹಾಸಿಕ ರಾಯಭಾರಿತನದ ಮೋಹಕ ಮೆರುಗು ಇದ್ದೇ ಇದೆ.

ಖಾನ್ ಮಾರ್ಕೆಟ್ಟಿನ - ಬಾಹರೀ ಸನ್ಸ್ ಕೂಡ ತುಂಬಾ ಹಳೆಯ ಪುಸ್ತಕದಂಗಡಿ. ಬಾಬಾ ಖರಗ್ ಸಿಂಗ್ ಮಾರ್ಗದಲ್ಲಿ ಯಾವ ಎಂಪೋರಿಯಂ ಗಳಿರಲಿಲ್ಲ. ಪುಟ್ಟ ಹನುಮಾನ್ ಮಂದಿರವಿತ್ತು ಅಷ್ಟೆ. ಈಗೆಲ್ಲ ರಾಜ್ಯಗಳ ಎಂಪೋರಿಯಂಗಳಾಗಿ ತುಂಬಾ ಒಳ್ಳೆಯದಾಗಿದೆ. ಎಲ್ಲವೂ ಇಲ್ಲಿಯೇ ಸಿಗುವಂತಾಗಿದೆ ಎನ್ನುತ್ತಾರೆ ಸಾವಿತ್ರಿ ಶಾಸ್ತ್ರಿ. ಈಗಲೂ ಬಾಬಾ ಖರಗ್ ಸಿಂಗ್ ಮಾರ್ಗದ ಹನುಮಾನ್ ಮಂದಿರದ ಪ್ರಸಿದ್ಧಿ ಹಾಗೇ ಇದೆ. ಪ್ರತಿ ಮಂಗಳವಾರ ಅಸಂಖ್ಯಾತ ಭಕ್ತರು ಸೇರಿರುತ್ತಾರೆ.

ಹೀಗೆ ಕೋಲಾರದಿಂದ ಬಿಹಾರ್, ಮುಂದೆ ದೆಹಲಿ ಹೀಗೆ 65 ವರ್ಷಗಳ ವಾಸದಲ್ಲಿ ಕನ್ನಡವನ್ನೇ ಬದುಕಿದ ಅಚ್ಚ ಕನ್ನಡತಿ. ಅವರು ಕನ್ನಡ, ಹಿಂದಿ, ಮರಾಠಿ ಅಲ್ಲದೇ ಮಗಧೀ ಭಾಷೆ ಕಲಿತುಕೊಂಡರಂತೆ. ಭೋಜಪುರಿ- ಬಂಗಾಲಿ ಅರ್ಥವಾಗುತ್ತದಂತೆ. ಶಿಸ್ತಿನಿಂದ ಲಕ್ಷಣವಾಗಿ ಗರಿ ಗರಿಯಾದ ಸೀರೆಯುಟ್ಟು ತುಂಬು ಅಕ್ಕರೆಯಿಂದ ನಗುನಗುತಾ ಬೆರೆಯುವ ಎಂಭತ್ತೆರಡರ ಹರೆಯದ ಸಾವಿತ್ರಿ ಶಾಸ್ತ್ರಿಯರಲ್ಲಿ ರಾಜಮಾತೆ ಕಳೆಯಿದೆ. ತುಂಬು ಸಂಸಾರವನ್ನು ಬಾಳಿ ಬದುಕಿದ ನೆಮ್ಮದಿಯಿದೆ. ಕೋಲಾರದ ಚಿನ್ನದ ಗಣಿಯಿಂದ ಬಂದ ಅವರ ಮನಸ್ಸೂ ಅಪ್ಪಟ ಚಿನ್ನದಂತೆ !! ಅವರು ನಮ್ಮೆಲ್ಲರ ಹೆಮ್ಮೆಯ ಕನ್ನಡತಿಯಾಗಿ, ಸ್ಫೂರ್ತಿಯ ಸೆಲೆಯಾಗಿ, ಪ್ರೀತಿಯ ನೆಲೆಯಾಗಿ ಪೂಜ್ಯ ಸ್ಥಾನದಲ್ಲಿ ನಿಲ್ಲುತ್ತಾರೆ. ಇದೇ ದೆಹಲಿ ಕನ್ನಡ ಶಾಲೆಯಲ್ಲಿ ಓದಿದ ಅವರ ಮೊಮ್ಮಗ ವಿಪುಲ್ ಮತ್ತು ನನ್ನ ಮಗ ಆದಿತ್ಯ ಒಂದನೇ ಇಯತ್ತೆಯಿಂದಲೂ ಕೂಡಿ ಆಡಿದವರು. ಈಗಲೂ ಅವರ ಮನೆಯಲ್ಲಿ ಒಂದು ದಿನ ಉಳಿದುಕೊಂಡರೆ ನನಗೆ ಅವ ಹೇಳುವುದು-'ಅಜ್ಜಿ ಮನೆಯಲ್ಲಿದ್ದೇನೆ' ಅಂತಲೇ. ಇರಲಿ ಏನಾದರೂ ಒಂದಿಲ್ಲಾ ಒಂದು ಬುದ್ಧಿಮಾತು ಹೇಳುತ್ತಾರೆ ಎಂದು ನನಗೂ ನಿಶ್ಚಿಂತೆ. ಮಕ್ಕಳ ಈ ಸ್ನೇಹ ಬಾಂಧವ್ಯದಲ್ಲಿ ದೆಹಲಿ ಬದುಕಿನ ನೂರು ತಲ್ಲಣಗಳಲ್ಲಿ ತಂಪೆರೆಯುವಂತೆ, ಸೋಲಿನ ಕ್ಷಣಗಳನ್ನು ಮೆಟ್ಟಿ ನಿಲ್ಲುವಂತೆ ನನಗೆ ಸಾವಿತ್ರಿ ಶಾಸ್ತ್ರಿ ಅವರ ಪ್ರೀತಿಯ ನೆರಳು ಸದಾ ದೊರಕಿದೆ. ಆ ಋಣ ತೀರಿಸಲಾಗದ ಅಪಾರ ಪ್ರೀತಿಗೆ ನಾನು ಎಂದೆಂದೂ ಚಿರಋಣಿ.

❑ ರೇಣುಕಾ ನಿಡಗುಂದಿ

# ಇದು ಕಥೆಯೋ ಅಲ್ಲ ವ್ಯಥೆಯೋ ?

ನಾನು ಕಾಸರಗೋಡಿನಲ್ಲಿ ಜನಿಸಿದ ಅಚ್ಚ ಕನ್ನಡಿಗ-ನನ್ನ ಕನ್ನಡ ಭಾಷೆಯ ಮೇಲಿನ ಗರ್ವ ಮತ್ತು ಅಭಿಮಾನ ಇತ್ತೀಚೆಗೆ ಕಲುಕಿದೆ. ನಾನು ಮಲೆಯಾಳಂ ಗೊತ್ತಿರುವ ಕನ್ನಡಿಗ ಅಲ್ಲದೆ, ಕನ್ನಡ ಗೊತ್ತಿರುವ ಮಲೆಯಾಳಿಯಾಗಿದ್ದೇನೆ ಎಂಬ ಸತ್ಯದ ಅರಿವಾಯಿತು. ನಮ್ಮ ಸಂಘದ ಯಾವುದೋ ಕಾರ್ಯಕ್ರಮದ ಸಂದರ್ಭದಲ್ಲಿ ಹೀಗೇ ಹರಟೆ ಹೊಡೆಯುತ್ತಿದ್ದಾಗ ನನ್ನ ಕನ್ನಡ ಸಂಭಾಷಣೆಯನ್ನು ಕೇಳಿದ ಒಬ್ಬ ಕನ್ನಡಾಭಿಮಾನಿಗಳು-"ನೀವು ಪಕ್ಕಾ ಮಲೆಯಾಳಿ ಎಂದು ನಿಮ್ಮ ಕನ್ನಡದಲ್ಲಿ ಎದ್ದು ಕಾಣುತ್ತದೆ" ಎಂದರು.

ಕವಿ ಕಯ್ಯಾರ ಕಿಂಞ್ಞಣ್ಣ ರೈಗಳ ಶಿಷ್ಯನಾಗಿ ನಾನು ನವಜೀವನ ಹೈಸ್ಕೂಲಿನ ವಿದ್ಯಾರ್ಥಿಯಾಗಿದ್ದಾಗ, ಕಾಸರಗೋಡು ಕೇರಳದಲ್ಲಿ ವಿಲೀನವಾಯಿತು. "ಕಾಸರಗೋಡು-ಕನ್ನಡನಾಡು" ಎಂದು ಉದ್ಗಾರ ಮಾಡುತ್ತಾ ಹೋರಾಟ ನಡೆಸಿ ಕೇರಳದ ಪೋಲಿಸರ ದಬ್ಬಾಳಿಕೆಗೆ ಒಳಗಾಗಿ ಪಟ್ಟ ಪರಿಶ್ರಮ ವ್ಯರ್ಥವಾಯಿತು. ಅಂದಿನ ನಮ್ಮ ಕರ್ನಾಟಕದ ರಾಜಕೀಯ ಧುರೀಣರು ಕಾಸರಗೋಡಿನ ಬಗ್ಗೆ ವ್ಯಥೆ ಪಡಲಿಲ್ಲ, ಪರಿಣಾಮವಾಗಿ ನಾನು ಮಲೆಯಾಳಿಯಾದೆ-ಕೇರಳ ಯುನಿವರ್ಸಿಟಿಯ ಗ್ರಾಜುವೇಟ್! ಕೊನೆಗೆ 1967ರಲ್ಲಿ ಕಾಸರಗೋಡನ್ನು ಬಿಟ್ಟು ದೆಹಲಿಗೆ ಬಂದು ಮುಂದಿನ ವಿದ್ಯಾಭ್ಯಾಸ ಮತ್ತು ಉದ್ಯೋಗಕ್ಕೆ ಇಳಿದೆ. ಈ ದೀರ್ಘ ಕಾಲದಲ್ಲಿ ಹಿಂದಿನ ನೋವೆಲ್ಲ ಹೋಗಿ, ವಿಭಿನ್ನವಾದ ಭಾಷೆಗಳ ವೈವಿಧ್ಯವನ್ನು ಕುತೂಹಲವಾಗಿ ಗಮನಿಸುವುದು ನನ್ನ ಹವ್ಯಾಸವಾಗಿದೆ. ಯಾವುದೇ ಪ್ರದೇಶದಲ್ಲಿ ಅಲ್ಲಿನ ಭಾಷೆಯ ಪ್ರತಿ 50 ಕಿಲೋಮೀಟರ್ ದಾಟಿದರೆ ಅದರ ಧಾಟಿಯೇ ಬದಲಾಗುತ್ತದೆ. ಇದು ನಮ್ಮ ಭಾಷೆಗಳ ಮತ್ತು ಜೀವನದ ನಿಟವಾದ ಸೌಂದರ್ಯದ ಒಂದು ಮುಖ.

ನಮ್ಮ ನಡೆ ನುಡಿಗಳು ನಾವು ಜೀವಿಸುವ ಸಮಾಜದ ಪರಿಸರದಲ್ಲಿ ಬದಲಾವಣೆಗೆ ಒಳಗಾಗುತ್ತದೆ. ನಾನು ದೆಹಲಿಗೆ ಬಂದಾಗ ಇಲ್ಲಿನವರೆಗೆ ದಕ್ಷಿಣ ಭಾರತದಿಂದ ಬಂದವರೆಲ್ಲರೂ 'ಮದ್ರಾಸಿಗಳು'! ಅಂದು ಕರ್ನಾಟಕದ ಬಗ್ಗೆ ಜನರಿಗೆ ಸಾಮಾನ್ಯ ತಿಳುವಳಿಕೆ ಬಹಳ ಕಡಿಮೆಯಾಗಿತ್ತು. ಆದರೆ ಕಾಲಕ್ರಮೇಣ ನಮ್ಮ ಕರ್ನಾಟಕದ ನಿಜಲಿಂಗಪ್ಪ, ಶರೀಫ್, ಪಟೇಲ್, ಹೆಗಡೆ, ಗೌಡ, ಗುಂಡೂರಾವ್, ಸ್ವಾಮಿ (ಬಂಗಾ-ಯಡಿಯು)ರಪ್ಪರಂತಹ ಧುರೀಣರು ಮುಖ್ಯವಾಗಿ ಟಿವಿ ಹಾಗೂ ಇತರ ಮಾಧ್ಯಮಗಳ ಮೂಲಕ ದೇಶದ ಇತರ ಪ್ರಾಂತ್ಯವಾಸಿಗಳಿಗೆ ಕರ್ನಾಟಕದ ಬಗ್ಗೆ ಸರಿಯಾದ ಮಾಹಿತಿ ದೊರಕಿಸಿದ್ದಾರೆ. ಕರ್ನಾಟಕ ಎಂದರೆ ಕರ್+ನಾಟಕ್ ಎಂದು ಸಂಧಿ ವಿಂಗಡಿಸಿ ಅರ್ಥ ಮಾಡುವಂತೆ ಸಹಕರಿಸಿದರು. ನಮ್ಮ ರಾಜ್ಯದಲ್ಲಿ ನಟ ಸಾರ್ವಭೌಮರು ಜನಿಸಿದರಲ್ಲದೆ ನಾಟಕ ಬರೆಯುವುದರಲ್ಲಿ, ಆಡುವುದರಲ್ಲೂ "ಜ್ಞಾನ" ಪೀಠ ಪುರಸ್ಕಾರ ಮೊದಲಾದ ಅನೇಕ ಗಣ್ಯ ಪುರಸ್ಕಾರಗಳನ್ನು ಪಡೆದು ನಟನೆಯಲ್ಲಿ ನಮ್ಮವರದು ಎತ್ತಿದ ಕೈಗಳೆಂದು ತೋರಿಸಿದ್ದಾರೆ.

ನನ್ನಂತಹವರು ನಾಟ್ಯರಂಗದಿಂದ ಕಾಲುಕಿತ್ತವರು ಕರ್ನಾಟಕದವನೆಂದು ಕೊಳ್ಳಲು ಆಯೋಗ್ಯನೇ. ಯಾಕೆಂದರೆ, ನಾನು ವೈಯಕ್ತಿಕವಾಗಿ ರಂಗವೇದಿಕೆ ಪ್ರವೇಶಿಸಿದ್ದು ಒಂದು ಸಾರಿ ಚಿಕ್ಕಂದಿನಲ್ಲಿ. ಅದು "ಪುಣ್ಯ ಕೋಟಿ" ಎಂಬ ಕಿರು ನಾಟಕದಲ್ಲಿ ಕರುವಿನ ಪಾತ್ರದಲ್ಲಿ-ಅಂಬೆಗಾಲಿಕ್ಕಿ ವೇದಿಕೆಯನ್ನು ಪ್ರವೇಶಿಸಿ "ಬೇ-ಬೇ" ಎಂದು ವಿಲಾಪಿಸಿದಾಗ, ನಿಜವಾಗಿ ಬೆಚ್ಚಿ ತಳಮಳಗೊಂಡು, ಅನಾಥ ಕರುವಿನ ಪಾತ್ರಕ್ಕೆ ನೈಜತೆ ಬಂದಿತ್ತು. ಕೊನೆಗೆ ನನ್ನ ನಟನೆಗೆ ಪ್ರಶಸ್ತಿ ಸ್ವೀಕರಿಸಲು ನಡುಗುತ್ತಾ ಎರಡು ಕಾಲುಗಳಿಂದ ನಡೆದೇ ಬಂದರೂ, ಪ್ರಶಸ್ತಿಯನ್ನು ಒಂದೇ ಕೈಯಿಂದ ತೆಗೆದುಕೊಳ್ಳಬೇಕಾಗಿ ಬಂತು. ಯಾಕೆಂದರೆ ಬಟನ್ ಬಿದ್ದು ಹೋಗಿದ್ದುದರಿಂದ ಒಂದು ಕೈಯಲ್ಲಿ ನಿಕ್ಕರನ್ನು ಭದ್ರವಾಗಿ ಹಿಡಿದುಕೊಂಡಿದ್ದೆ! ಪ್ರೇಕ್ಷಕರ ಚಪ್ಪಾಳೆಯ ಭರದಲ್ಲಿ ಎಲ್ಲಿ ನನ್ನ ನಿಕ್ಕರ್ ಜಾರಬಹುದೋ ಎಂದು ಭಯದಿಂದ ಓಡಿದ ನನ್ನ ಓಟ ಮಿಲ್ಖಾಸಿಂಗನಿಗಿಂತ ಮಿಗಿಲಾಗಿದ್ದಿರಬಹುದು! ಅಂದು ವೇದಿಕೆಯಿಂದ ಕಾಲುಕಿತ್ತ ನನಗೆ ಇಂದಿಗೂ ಸಭಾಕಂಪನವೆಂದರೆ ಭೂಕಂಪಕ್ಕಿಂತಲೂ ಹೆಚ್ಚಿನದ್ದು.

ದೆಹಲಿಯ ಕಾಕತೀಯ ಅಪಾರ್ಟ್‌ಮೆಂಟ್‌ನಲ್ಲಿ ಕಳೆದ ಸುಮಾರು 20 ವರ್ಷಗಳಿಂದ ನಾನು "ಉಂಟಾನು". ಅಲ್ಪ ಸ್ವಲ್ಪ ತೆಲುಗು ಭಾಷೆ ಇಲ್ಲಿನ ಪ್ರವಾಸೀ ಆಂಧ್ರ ಜನರ ಸಹವಾಸದಿಂದ ನನ್ನ ನಿತ್ಯಜೀವನದಲ್ಲಿ ಸೇರಿಕೊಂಡಿದೆ. ರಾವುಗಾರು, ಮೂರ್ತಿಗಾರು, ರೆಡ್ಡಿಗಾರು ಮತ್ತಿತರ ಗಾರುಗಳೊಂದಿಗೆ ಭಟ್‌ಗಾರು ಆಗಿದ್ದೇನೆ!. ತೆಲುಗಿನ "ರಂಡಿ-ಕುಚ್ಚಂಡಿ"ಯಂತಹ ಅಂಡಿ-ಮಂಡಿಗಳ ಮಧ್ಯೆ ಮೊದಮೊದಲು ನಾನು ಚಂಡಿಯಾಗುತ್ತಿದ್ದೆ! ಅಕ್ಕಪಕ್ಕದಲ್ಲಿ ದೇಶದ ಮತ್ತಿತರ ಭಾಷೆಯ ಜನಗಳೊಂದಿಗೆ ಇರುವುದರಿಂದ ವ್ಯವಹಾರ ರಾಷ್ಟ್ರಭಾಷೆಯಲ್ಲೇ. ಇಲ್ಲೇ ಹುಟ್ಟಿ ಬೆಳೆದ ನಮ್ಮ ಮಕ್ಕಳು ಕನ್ನಡ ಗೊತ್ತಿರುವ ಹಿಂದುಸ್ತಾನಿಗಳು! ಪಂಜಾಬಿಗಳಿಗೆ ನನಗೆ ತೆಲುಗು ಬರುವುದಿಲ್ಲ ಎಂದರೆ ಆಶ್ಚರ್ಯ-'ಅರೇ ಆಪ್ ಕೈಸಾ ಮದ್ರಾಸೀ ಹೋ? ಆಪ್‌ಕೋ ತೇಲ್‌ಗೂ ನಹೀಂ ಆತಾ ಹೆ ಕ್ಯಾ?' ಎಂದು ಕೇಳುತ್ತಾರೆ. ಅದಕ್ಕೆ "ಭಗವಾನ್ ಕೇ ಕೃಪಾಸೇ ಆಂಧ್ರ ಕಾ ಹವಾ ಯಾ ಭೀಮಾರಿ ನಹೀಂ ಲಗಾ, ಆಪ್ ಕೋ ಕೋಯೀ ಪರೇಶಾನೀ ಹೋತೋ ಇಸಬ್‌ಗೋಲ್ ಲೇ ಲೀಜಿಯೇ, ಸಬ್ ಠೀಕ್ ಹೋ ಜಾಯೆಗಾ" ಎಂದು ಉತ್ತರಿಸಿದರೆ ಹುಳಿ ಹುಳಿಯಾಗಿ ನಕ್ಕರು.

ಇಲ್ಲೊಬ್ಬರು ಕೇರಳದವರು, ಹೆಸರು ಚಕ್ಕ ಪರಂಬಿಲ್ ನಾರಾಯಣನ್ ನೀಲಕಂಡನ್ ನಂಬೂದಿರಿಪಾಡ್. ಚಿಕ್ಕದಾಗಿ ಸಿಎನ್‌ಎನ್ ನಂಬೂದಿರಿ. ಹಗಲೂ ರಾತ್ರಿಯೂ ಸಿಎನ್‌ಎನ್ ಚಾನೆಲ್‌ಗೆಂದು ಬರುವ ನೂರಾರು ರಾಂಗ್ ನಂಬರ್ ಕಾಲ್‌ಗಳಿಂದ ಹತಾಶರಾದ ಅವರು ಕೊನೆಗ ಕಪ್ಪು ಬಟ್ಟೆಯನ್ನು ಉಟ್ಟು ಗಡ್ಡ ಬೆಳೆಸಿಕೊಂಡು ಸ್ವಾಮಿಯೇ ಶರಣಂ ಎಂದು ಅಯ್ಯಪ್ಪ ಸ್ವಾಮಿಗೇ ಶರಣಾದರು! ಆದರೂ ಹಲವು ಸಮಯ ರಾಂಗ್ ಕಾಲ್‌ಗಳಿಂದ ಮುಕ್ತರಾಗಲಿಲ್ಲ!


ನಾವು ಅಕ್ಕಪಕ್ಕದ ಮನೆಯವರನ್ನು ನೆರೆ ಹೊರೆಯವರೆಂದು ಹೇಳುತ್ತೇವೆ. ಬಹುಶಃ ಅವರ ಗೋಜಿಗೆ ನಾನು ಹೋದರೆ "ಹೊರೆ"ಗಳ ನೆರೆಯೇ ಬರಬಹುದು ಎಂಬ ಸೂಚನೆ ಇರಬೇಕು. ಆಂಧ್ರದ "ಕಾಕತೀಯ" ರಾಜಮನೆತನದ ಹೆಸರು. ದೆಹಲಿಯವರಿಗೆ "ಕಾಕಾತೈಯ್ಯಾ" ಆಗಿದೆ. ತೆಲುಗಿನಲ್ಲಿ "ತಾಗುವುದು" ಎಂದರೆ ಕುಡಿಯುವುದು. ಅವರಿಗೆ ಅದು ಇಷ್ಟವಾದುದು. ಹಾಗೆ ಅದರ ಬಿಲ್ಲನ್ನು ಇನ್ನೊಬ್ಬರಿಗೆ ತಾಗಿಸುವುದೆಂದರೆ ಅದು ಬಹಳ ಇಷ್ಟ. ಇಲ್ಲಿನ ತೆಲುಗು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಿಗೆ "ವಿಸ್ಕಿನಾಥ" ಎಂದೇ ನಾಮಕರಣವಾಗಿದೆ. ಅವರ ಸಹಯೋಗಿ "ತಣ್ಣಿ" ವಾಸು ಅವರು ದೆಹಲಿಯ ಸೆಖೆಗೆ ತಳಮಳಿಸುತ್ತಾ ತಮ್ಮ "ಚಿಲ್ಡ್ ಬೀಯರ್" ಎಂಬ ನಾಮವನ್ನೂ ಅನ್ವರ್ಥಗೊಳಿಸಿದ್ದಾರೆ. ಒಂದು ಬಾರಿ ನಾನು ಇವರಿಬ್ಬರ ಮಧ್ಯೆ ಬಕರಾ ಆಗಿದ್ದೆ. ಇಬ್ಬರೂ ಒಂದೇ ಧ್ವನಿಯಲ್ಲಿ ನನ್ನನ್ನು ನೋಡುತ್ತಲೇ "ಕಂಗ್ರಾಟ್ಸ್, ಮೆನೀ ಹ್ಯಾಪೀ ರಿಟನ್ಸ್ ಆಪ್ ದಿ ಡೇ" ಎಂದು ಸಂಕೇತ ಸೂಚನೆ ಮಾಡಿದ್ದರು! ದಾಕ್ಷಿಣ್ಯ ಬಿಟ್ಟು ನಾನು ಅಂದಿನ ದಿನ ನನ್ನ ಬರ್ತ್‌ಡೇ ಆಗಲೀ, ಅನಿವರ್ಸರಿಯಾಗಲೀ ಅಲ್ಲ ಎಂದೆ. ಅದಕ್ಕೆ ಅವರು "ಪರವಾಗಿಲ್ಲ, ಹೇಗಿದ್ದರೂ ಒಂದಲ್ಲ ಒಂದು ದಿನ ಬಂದೇ ಬರುತ್ತದಲ್ಲ, ಸಿಲೆಬ್ರೇಶನ್‌ಗೆ ಇಂದೇ ಒಳ್ಳೆಯ ದಿನ" ಅನ್ನಬೇಕೇ ! ಅಂತೂ ಅವರಿಗೆ ಕೂಡಲೇ ಬೇಕಾದ ವ್ಯವಸ್ಥೆಯನ್ನು ಮಾಡಿಸಿ ನಾನು ಹೊರಟಾಗ ಅಲ್ಪ ಸ್ವಲ್ಪ ಕನ್ನಡ ತಿಳಿದಿರುವ ವಾಸು ಕೇಳಿದರು "ಯಾಕೆ ನಿಮಗೆ ತೊಂದರೆ?" ನಾನು ಎಲಾ, ಇವರು ನನಗೆ ತೊಂದರೆ ಕೊಟ್ಟ ಮೇಲೆ ಹೀಗೆ ಕೇಳಿದರಲ್ಲಾ ಅಂದುಕೊಂಡೆ. ತೆಲುಗಿನಲ್ಲಿ "ತೊಂದರೆ" ಎಂದರೆ ನನ್ನ ಕನ್ನಡದಲ್ಲಿ ಅವಸರ ಎಂದು ಅರ್ಥ-ಇದು ನನ್ನ ಟ್ಯೂಬ್ ಲೈಟಿಗೆ ಆಮೇಲೆ ತಿಳಿಯಿತು!

ಅಂತೂ ಹೀಗೇ ನಮ್ಮ ಭಾಷೆಗಳ ವೈವಿಧ್ಯದಿಂದ ಆಗುವ ಆವಾಂತರಗಳು ಅನೇಕ. ನಿತ್ಯಜೀವನದಲ್ಲಿ ಅಳುವನ್ನು ತರುವ ಸಂದರ್ಭಗಳು ತಾನಾಗಿಯೇ ಬರುತ್ತವೆ. ಆದರೆ ನಮಗೆ ನಗುವ ಅವಕಾಶಗಳನ್ನು ನಾವಾಗಿ ಮಾಡಿಕೊಳ್ಳಲು ಈ ವೈವಿಧ್ಯದಿಂದಲೂ ಸಾಧ್ಯವಷ್ಟೇ!

❑ **ರಾಮಚಂದ್ರ ಭಟ್, ನವದೆಹಲಿ**

# ಡಾ. ಜಿ.ಎ.ಬಿರಾದಾರ ಅವರ ಕೃತಿ 'ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ' ಬಿಡುಗಡೆ

**ಕೇಂದ್ರ ಸಂಸ್ಕೃತಿ ಮಂತ್ರಾಲಯದ ಭಾರತ ರಾಷ್ಟ್ರೀಯ ಪತ್ರಾಗಾರ, ನವದೆಹಲಿಯಲ್ಲಿ ಪತ್ರಾಗಾರ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಡಾ. ಜಿ.ಎ. ಬಿರಾದಾರ ಅವರು ಇತಿಹಾಸ ಸಂಶೋಧಕರು, ಈಗಾಗಲೇ ಅವರ 'ಕರ್ನಾಟಕದ ಸರದಾರ ಪಟೇಲ ಚನ್ನಬಸಪ್ಪ ಅಂಬಲಿ' (2001), 'ಮುಂಬಯಿ ಕರ್ನಾಟಕದಲ್ಲಿ ಸವಿನಯ ಕಾನೂನು ಭಂಗ ಚಳುವಳಿ' (2010) ಮತ್ತು 'Mahatma Gandhi's Campaign Against Untouchability in Karnataka'(2010) ಎನ್ನುವ ಮಹತ್ವದ ಸಂಶೋಧನಾ ಗ್ರಂಥಗಳು ಪ್ರಕಟವಾಗಿವೆ. ಕಳೆದ ಏಪ್ರಿಲ್ ತಿಂಗಳಲ್ಲಿ ಅವರ ಮತ್ತೊಂದು ಕೃತಿ "ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ" ದೆಹಲಿಯಲ್ಲಿ ಬಿಡುಗಡೆಯಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿದ್ದ ಶ್ರೀನಿವಾಸರಾವ ಕೌಜಲಗಿಯವರು ಕರ್ನಾಟಕ ಏಕೀಕರಣದ ಪ್ರಮುಖ ಹೋರಾಟಗಾರರಾಗಿ ಇತಿಹಾಸ ನಿರ್ಮಿಸಿದ್ದನ್ನು ದಾಖಲಿಸಿರುವ ಈ ಕೃತಿಯ ಮುನ್ನುಡಿಯ ಆಯ್ದ ಭಾಗ ಇಲ್ಲಿದೆ. . . .**




ಬಿಜಾಪುರದ ಶ್ರೀನಿವಾಸರಾವ ಕೌಜಲಗಿ ರಾಯರು ಐದು ತಲೆಮಾರುಗಳ ಹಿಂದಿನ ವ್ಯಕ್ತಿ. ಅವರು ಟಿಳಕ, ಗಾಂಧೀಜಿ ಯುಗದಲ್ಲಿ ಕರ್ನಾಟಕದಲ್ಲಂತೂ ಸರಿಯೆ, ರಾಷ್ಟ್ರದಾದ್ಯಂತ ಪ್ರಸಿದ್ಧ ವ್ಯಕ್ತಿಗಳಾಗಿದ್ದರು ಎಂದು ಕೇಳಿ ಬಲ್ಲವರಾಗಿದ್ದೆವು. ಕೌಜಲಗಿ ಶ್ರೀನಿವಾಸರಾಯರು ಹುಟ್ಟಿದ್ದು 1873ರ ಜುಲೈ ತಿಂಗಳಲ್ಲಿ, ಮರಣ ಹೊಂದಿದ್ದು 1940ರ ಫೆಬ್ರವರಿಯಲ್ಲಿ. ಸುಮಾರು 67 ವರುಷ ಬಾಳಿ ಬದುಕಿದ ಶ್ರೀನಿವಾಸರಾಯರು, ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದ್ದು 1895ರಲ್ಲಿ, ಅಂದರೆ ತಮ್ಮ ವಯಸ್ಸಿನ 22ರಲ್ಲಿ ರಾಜಕೀಯಕ್ಕೆ ಬಂದಿದ್ದರು. ಅನಂತರ ಅವರು ಕಾಲವಾಗುವವರೆಗೆ ಸುಮಾರು 40–45 ವರುಷ ಕರ್ನಾಟಕದಲ್ಲಷ್ಟೇ ಅಲ್ಲ ಅಖಿಲ ಭಾರತದಲ್ಲಿ ಮುಂಚೂಣಿಯ ಮುಖಂಡರಾಗಿದ್ದರು.

ಲೋಕಮಾನ್ಯ ತಿಳಕರಿಗೆ ಅತ್ಯಂತ ಹತ್ತಿರದವರಾಗಿದ್ದಂತೆ ಅವರ ಅನಂತರ ಬಂದ ಮಹಾತ್ಮಾ ಗಾಂಧೀಜಿ ಅವರ ನಿಕಟವರ್ತಿಗಳಾಗಿದ್ದರು. ಡಾ ಬಿರಾದಾರ ಅವರು, ಶ್ರೀನಿವಾಸರಾಯರ 45 ವರುಷಗಳ ಎಲ್ಲ ಘಟನೆಗಳನ್ನು ಆಧಾರ ಸಹಿತವಾಗಿ ದಾಖಲಿಸಿದ್ದು ಈ ಪುಸ್ತಕದ ಹಿರಿಮೆ. ಒಟ್ಟು 14 ಅಧ್ಯಾಯಗಳಲ್ಲಿ ಅವರ ಇತಿಹಾಸ ವಿಸ್ತೃತವಾಗಿ ಚೆಲ್ಲುವರಿದಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕ ಏಕೀಕರಣ ಮೊದಲಾದ ವಿಷಯಗಳ ವ್ಯಾಪ್ತಿಯ ದೃಷ್ಟಿಯಿಂದ ಇಂಥ ಪ್ರಬಂಧಗಳು ಸಾಮಾನ್ಯವಾಗಿ ಸುದೀರ್ಘ ವರ್ಣನೆ, ವೈಭವೀಕರಣ, ವಿಷಯಾಂತರಕ್ಕೆ ತುತ್ತಾಗುತ್ತವೆ. ಆದರೆ ಇಲ್ಲಿಯ ಪ್ರತಿಯೊಂದು ಅಧ್ಯಾಯಗಳು, ಚೊಕ್ಕಟವಾಗಿ ತಮ್ಮ ಅಧ್ಯಾಯಕ್ಕಷ್ಟೇ ಸೀಮಿತವಾಗಿವೆ. ವಿಷಯಾಂತರದ ಗೊಂದಲವಿಲ್ಲ, ಕಥಾ ನಾಯಕನ ವಿಷಯದಲ್ಲಿ ಪ್ರತಿಯೊಂದಕ್ಕೂ ಆಧಾರಗಳನ್ನು ಕೊಡಲಾಗಿದೆ. ಅದುವೆ ಇಲ್ಲಿಯ ವಿಶೇಷವೆನಿಸುತ್ತದೆ. ಮತ್ತು ಅದು ಲೇಖಕರು ವಿಷಯಗಳನ್ನು ಸಂಗ್ರಹಿಸುವಲ್ಲಿಯ ಶ್ರಮವನ್ನೂ ಸೂಚಿಸುತ್ತದೆ. ತಮ್ಮ ವಿಷಯಗಳ ಮಂಡನೆಗಾಗಿ ಡಾ. ಬಿರಾದಾರರು ಸಮಕಾಲೀನ ಸರಕಾರಿ ಕಡತಗಳನ್ನು, ವೃತ್ತ ಪತ್ರಿಕೆಗಳನ್ನು, ಸಮಕಾಲೀನ ವ್ಯಕ್ತಿಗಳ ಸ್ಮೃತಿಗಳನ್ನು ಆಧಾರವಾಗಿ ದಾಖಲಿಸಿದ್ದು ಇಲ್ಲಿಯ ವಿಶೇಷವಾಗಿದೆ. ಉದಾಹರಣೆಗಾಗಿ ಕರ್ನಾಟಕದ ರಾಷ್ಟ್ರೀಯ ಪತ್ರಿಕೆ ಸಂಯುಕ್ತ ಕರ್ನಾಟಕವು 1930ರಲ್ಲಿ ಬೆಳಗಾವಿಯಿಂದ ಪ್ರಾರಂಭವಾಯಿತೆಂಬುದು ಈ ವರೆಗೆ ತಿಳಿದ ವಿಷಯವಾಗಿತ್ತು. ಆದರೆ ಸಂಯುಕ್ತ ಕರ್ನಾಟಕ ಎಂಬ ಹೆಸರಿನ ಪತ್ರಿಕೆಯನ್ನು ಕೌಜಲಗಿ ಶ್ರೀನಿವಾಸರಾಯರು ಮತ್ತು ಅವರ ಸ್ನೇಹಿತರು 1920ಕ್ಕಿಂತ ಮೊದಲೇ ಪ್ರಕಟಿಸಬೇಕೆಂಬ ಪ್ರಯತ್ನ ಮಾಡಿದ್ದು ಹೊಸ ವಿಷಯ. ಅದು ಈ ಪುಸ್ತಕದಿಂದ ಗೊತ್ತಾಗುತ್ತಿದೆ . . .

ಲೋಕಮಾನ್ಯ ಟಿಳಕರು ಕೊಲಂಬೊ ಮಾರ್ಗವಾಗಿ ಇಂಗ್ಲೆಂಡಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಬಿಜಾಪುರಕ್ಕೆ ಬಂದಿದ್ದರು. ಅದನ್ನು ಬಿರಾದಾರರು ದಾಖಲಿಸುವಾಗ, 'ಈ ಕುರಿತು ಮುದವೀಡು ಕೃಷ್ಣರಾಯರು ಮುಂದಿನಂತೆ ದಾಖಲಿಸಿರುವರು' ಎಂದು ಹೇಳುತ್ತ ಘಟನೆಯನ್ನು ವಿವರಿಸುತ್ತಾರೆ. 'ಲೋಕಮಾನ್ಯ ಟಿಳಕರು 1918ರಲ್ಲಿ ಇಂಗ್ಲೆಂಡಿಗೆ ಕೊಲಂಬೊದ ಮಾರ್ಗವಾಗಿ ಹೊರಟಾಗ ವಿಜಾಪುರಕ್ಕೆ ಬಂದು 12 ಗಂಟೆಗಳ ವರೆಗೆ ಅಲ್ಲಿ ತಂಗಿ ಕರ್ನಾಟಕದ ಆತಿಥ್ಯವನ್ನು ಸ್ವೀಕರಿಸಿ ಕನ್ನಡ ಜನಾಂಗದ ಶ್ರೇಯಶ್ಚಿಂತನಗಳೊಂದಿಗೆ ಮುಂದೆ ಸಾಗಬೇಕೆಂದು ಹಟದಿಂದ ತಮ್ಮಲ್ಲಿಗೆ ಬರಮಾಡಿಕೊಂಡು ಉತ್ತರ ಕರ್ನಾಟಕದ ಭಾವೀ ನೀರನ್ನು ತಮ್ಮಲ್ಲಿ ಕಲೆ ಹಾಕಿ, ಲೋಕಮಾನ್ಯರ ಪ್ರವಾಸ ನಿಧಿಗೆ ಹತ್ತು ಸಾವಿರ ರೂಪಾಯಿಗಳ ನಿಧಿಯನ್ನು ಕರ್ನಾಟಕದ ಪರವಾಗಿ ಸಮರ್ಪಿಸಿ ಅವರನ್ನು ಬೀಳ್ಕೊಟ್ಟ ಆ ಪ್ರಚಂಡ ಸಂಭ್ರಮದ ಸಮಾರಂಭ ನನ್ನ ಸ್ಮೃತಿಪಟದೊಳಗಿಂದ ಎಂದಿಗೂ ಹಾರುವಂತಿಲ್ಲ. ಹೀಗೆ ಶ್ರೀನಿವಾಸರಾಯರು ಕರ್ನಾಟಕದ ಸನಾತನ ಪರಂಪರೆಗೆ ತಕ್ಕದಾದ ರೀತಿಯಲ್ಲಿ ಉದಾರಚರಿತರೇ ಆಗಿದ್ದರು.' ಶ್ರೀನಿವಾಸರಾವ ಕೌಜಲಗಿಯವರು ವಿಜಾಪುರ ಜಿಲ್ಲೆಯಲ್ಲಿ ತಿರುಗಾಡಿ ಬ್ರಿಟಿಷ್ ಸರಕಾರದ ವಿರುದ್ಧ ಯಾವ ರೀತಿಯಾಗಿ ಪ್ರಚೋದನಕಾರೀ ಭಾಷಣ ಮಾಡುತ್ತಿದ್ದರು ಎಂಬುದರ ಸರಿಯಾದ ಮಾಹಿತಿ 1922ರ ಸೆಪ್ಟಂಬರ್ ತಿಂಗಳಲ್ಲಿ ನ್ಯಾಯಾಲಯಕ್ಕೆ ನೀಡಿದ ಸಾಕ್ಷಿಗಳ ವಿವರಗಳಿಂದ ತಿಳಿಯುವುದು. ಅಸಹಕಾರ ಚಳುವಳಿಯ ದಿನಗಳಲ್ಲಿ ಶ್ರೀನಿವಾಸರಾಯರು ಕರ್ನಾಟಕದಾದ್ಯಂತ ಪ್ರವಾಸ ಮಾಡಿದರು. ಈ ಬಗ್ಗೆ ಹಲವಾರು ನಿದರ್ಶನಗಳನ್ನು ದಾಖಲಿಸಿದ ಡಾ. ಬಿರಾದಾರರು ಒಂದೆಡೆ, 1921ರ ಮಾರ್ಚ್ ತಿಂಗಳಲ್ಲಿ ತುಳಸೀಗೇರಿಗೆ ಬಂದುದನ್ನು ದಾಖಲಿಸುತ್ತಾರೆ.

ಬ್ರಾಹ್ಮಣ ಬ್ರಾಹ್ಮಣೇತರ ಐಕ್ಯತೆಯ ಬಗ್ಗೆ ಹೇಳುವಾಗ 'ಬಾಂಬೇ ಕ್ರಾನಿಕಲ್ ಪತ್ರಿಕೆಯ ಪ್ರತಿನಿಧಿ ಒಮ್ಮೆ ಶ್ರೀನಿವಾಸರಾವ ಕೌಜಲಗಿ ಅವರೊಂದಿಗೆ ಮಾಡಿದ ಸಂಭಾಷಣೆಯಲ್ಲಿ ಶ್ರೀನಿವಾಸರಾಯರು ಬ್ರಾಹ್ಮಣ ಬ್ರಾಹ್ಮಣೇತರರ ವಾದವನ್ನು ಹೇಗೆ ಬಿಡಿಸಬೇಕೆಂಬುದರ ಬಗ್ಗೆ ತಮ್ಮ ಕಾರ್ಯಕ್ರಮದ ರೂಪುರೇಷೆಯನ್ನು ಲೇಖಿಸಿದ್ದರು' ಎಂದು ಹೇಳುತ್ತ ಅದರ ವಿವರಗಳನ್ನು ಕೊಡುತ್ತಾರೆ. ಅದು ಅವರ ಮನುಷ್ಯ ಸ್ವಭಾವದ ಪರಿಶೀಲನವನ್ನು ಮತ್ತು ಸೂಕ್ಷ್ಮವಾದ ರಾಜಕಾರಣ ಧೋರಣದ ಕೌಶಲ್ಯವನ್ನು, ಸ್ವಾರ್ಥತ್ಯಾಗ ಬುದ್ಧಿಯನ್ನು ಚೆನ್ನಾಗಿ ನಿದರ್ಶನಕ್ಕೆ ತಂದುಕೊಡುವಂತಾಗಿದ್ದಿತು. ಸಮಾಜದಲ್ಲಿ ಪರಸ್ಪರರ ಮೇಲೆ ಪ್ರೇಮ ಮತ್ತು ವಿಶ್ವಾಸಗಳನ್ನಿಟ್ಟರೆ ಸಮಾಜದ ಐಕ್ಯವು ಸಹಜ ಶಕ್ಯವೆಂದು ಅವರು ಸಾರಿ ಹೇಳುತ್ತಿದ್ದರು. ಅದರಂತೆ ಸಿಂದಗಿ ಉಕ್ಕಲಿ ಅಥಣಿ ಮುಂತಾದ ಸ್ಥಳಗಳಲ್ಲಿ ಬಹು ವಿಕೋಪಕ್ಕೆ ಹೋದ ಬ್ರಾಹ್ಮಣ ಬ್ರಾಹ್ಮಣೇತರವಾದವನ್ನು ಮುರಿಬಡಿದಿದ್ದು ಶ್ರೀನಿವಾಸರಾವ ಕೌಜಲಗಿ ಅವರ ಕುಶಲತೆಗೆ ಸಾಕ್ಷಿಯಾಗಿದ್ದಿತು.

ಸಮಾರೋಪವನ್ನು ಸಹ ಡಾ. ಬಿರಾದಾರರು, ಶ್ರೀನಿವಾಸರಾಯರ ಸಮಕಾಲೀನ ಚಂದ್ರಶೇಖರ ಶಾಸ್ತ್ರಿಗಳ ಮಾತುಗಳಿಂದ ಮುಗಿಸುತ್ತಾರೆ. ಶ್ರೀನಿವಾಸರಾಯರು ಕಾಲವಾದಾಗ ಚಂದ್ರಶೇಖರ ಶಾಸ್ತ್ರಿಗಳು ರಾಯರೊಟ್ಟು ವ್ಯಕ್ತಿತ್ವವನ್ನು ಚಿತ್ರಿಸಿದ್ದಾರೆ.. . .

ಹೀಗೆ ಡಾ. ಬಿರಾದಾರ ಅವರ ಸರಳವಾದ ಭಾಷೆ. ಕಥೆ ಹೇಳುವ ನಿರಾಡಂಬರ ರೀತಿ, ಓದುಗನನ್ನು ಸೆರೆ ಹಿಡಿಯುತ್ತದೆ. ಜೊತೆಗೆ ಇಂದಿಗೂ ಕೂಡ ಅಂದಿನ ಬ್ರಾಹ್ಮಣ ಬ್ರಾಹ್ಮಣೇತರರ ಐಕ್ಯತೆ ಪರಸ್ಪರರಲ್ಲಿರುವ ಸೌಹಾರ್ದತೆ ಮಾದರಿಯಾಗುತ್ತದೆ. ಇತಿಹಾಸವನ್ನು ಹೇಳುವ, ದಾಖಲಿಸುವ ಮೂಲ ಉದ್ದೇಶವು ಕೂಡ ಅದುವೇ ಆಗಿದೆ. ಇತಿಹಾಸ ಕೇವಲ ದಾಖಲೆ ಅಲ್ಲ. ಇಸ್ವಿಗಳ ಪಟ್ಟಿಯೂ ಅಲ್ಲ. ಸೋಲು ಗೆಲುವಿನ ಕಥೆಯೂ ಅಲ್ಲ. ಇತಿಹಾಸವು ಮನುಷ್ಯ ಮನುಷ್ಯನನ್ನು ಪ್ರೀತಿಸುವ ಕೊಂಡಿಯಾಗಬೇಕು. ಅದನ್ನು ಸಾಧಿಸುವಲ್ಲಿ ಡಾ. ಬಿರಾದಾರರು ಸಫಲರಾಗಿದ್ದಾರೆ ಎಂದೇ ಹೇಳಬೇಕು.

ಶ್ರಮಪಟ್ಟು, ಕ್ಷೇತ್ರ ಕಾರ್ಯಗಳನ್ನು ಮಾಡಿ ವಿಷಯಗಳನ್ನು ಸಂಗ್ರಹಿಸಿ ಸಂಶೋಧನೆಯನ್ನು ಮಾಡಿ ಪ್ರಬಂಧಗಳನ್ನು ರಚಿಸುವ ಕಾಲ ಮುಗಿದೇ ಹೋಯಿತು ಎನ್ನುವ ದಿನಗಳಲ್ಲಿ, ಶಿಕ್ಷಣೇತರ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ತರುಣ ಡಾ. ಬಿರಾದಾರರು, ತುಂಬ ಶ್ರಮ ವಹಿಸಿ ಕಳೆದ ಶತಮಾನದ ಆದಿಯಲ್ಲಿ ಕರ್ನಾಟಕದಲ್ಲಿ ನಡೆದ ಅಸಹಕಾರ ಚಳುವಳಿ, ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕಕ್ಕೆ ಪ್ರತ್ಯೇಕವಾಗಿ ದೊರೆತ ಕಾಂಗ್ರೆಸ್ ಸಮಿತಿ ವಿಶೇಷವಾಗಿ ಕರ್ನಾಟಕ ಏಕೀಕರಣ ಸಮಿತಿಯ ಮೊದಲ ದಿನಗಳ ಬಗ್ಗೆ ಕರಾರುವಾಕ್ಕಾದ ಮಾಹಿತಿಗಳು 'ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ' ಪುಸ್ತಕದಲ್ಲಿ ದಾಖಲಿಸಿದ್ದಾರೆ.

❑ **ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ**

# ಶ್ರೀಮತಿ ನೇತ್ರಾವತಿ ಮಯ್ಯನವರಿಗೆ ಸನ್ಮಾನ



ಇತ್ತೀಚೆಗೆ ನಡೆದ ಜನಕಪುರಿ ಕನ್ನಡ ಕೂಟದ ವಾರ್ಷಿಕೋತ್ಸವ ಸಮಾರಂಭದಲ್ಲಿ 'ಮಹಿಳಾ ಮತ್ತು ಮಕ್ಕಳ ದಿನಾಚರಣೆಯನ್ನು' ಸಂಭ್ರಮದಿಂದ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಮಹಿಳಾ ಮಂಡಳಿಯವರಿಂದ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯನವರನ್ನು ಸನ್ಮಾನಿಸಲಾಯಿತು.

2005ರ ಕೂಟರತ್ನ ವಿಜೇತೆ ಶ್ರೀಮತಿ ನೇತ್ರಾವತಿ ಮಯ್ಯ ಎಲ್ಲರಿಗೂ ಚಿರಪರಿಚಿತವಾಗಿರುವಂತಹ ಮಹಿಳೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆ ಮಾತು ಇವರಿಗಾಗಿಯೇ ಹೇಳಿ ಮಾಡಿಸಿದಂತಿದೆ. ಕಾಸರಗೋಡು ತಾಲೂಕಿನ ಮಂಗಲ್ಪಾಡಿ ಗ್ರಾಮದ ಮಾಣಿ ಹಿತ್ಲು ಎಂಬಲ್ಲಿ ಶ್ರೀಯುತ ಶಂಕರಣ್ಣ ಮತ್ತು ಶ್ರೀಮತಿ. ಪಾರ್ವತಮ್ಮನವರ ಸುಪುತ್ರಿಯಾಗಿ 25–10–1933 ರಲ್ಲಿ ಜನಿಸಿದರು. 1953 ರಲ್ಲಿ ಶ್ರೀ ಶೇಷಪ್ಪಯ್ಯನವರೊಡನೆ ವಿವಾಹವಾದರು. ಸರಕಾರಿ ಕೆಲಸವಿದ್ದ ಕಾರಣ ದೇಶದ ಅನೇಕ ಮಹಾ ನಗರಗಳನ್ನು ಸುತ್ತಾಡಿ ಕೊನೆಗೆ ದೆಹಲಿಗೆ ಬಂದು ನೆಲೆಸಿದರು. ಹೀಗಿರುವಾಗ ಹದಿಹರೆಯದ ಇಬ್ಬರು ಹೆಣ್ಣು ಮಕ್ಕಳನ್ನು ಕಳೆದುಕೊಂಡರು. ಮುಂದೆ 1995 ರಲ್ಲಿ ಪತಿಯ ವಿಯೋಗವನ್ನೂ ಅನುಭವಿಸಬೇಕಾಗಿ ಬಂತು. ಜನಕಪುರಿಯ ಸ್ವಂತ ಮನೆಯಲ್ಲಿ ಯಾರ ಹಂಗಿಲ್ಲದೇ ಜೀವಿಸುತ್ತಾ ತಮ್ಮ ದುಃಖವನ್ನು ಮರೆತು ನಸು ನಕ್ಕು ಇತರರಿಗೆ ಅಕ್ಕರೆಯಿಂದ ಸಹಾಯ ಮಾಡುತ್ತಿರುವ ಈ ಮಮತಾಮಯಿಯನ್ನು ನೋಡಿ ಪಾರಿಜಾತ ಪುಷ್ಪದ ನೆನಪಾಗುವುದೆನಗೆ, ಅವರ ಕಾರ್ಯಸಾಧನೆಯನ್ನು ಕಂಡು ಶ್ರೀಗಂಧದ ನೆನಪಾಗುವುದೆನಗೆ.

ದೆಹಲಿ ಕನ್ನಡಿಗರ ಹೆಮ್ಮೆಯ ಭವ್ಯ ಭವನದ ನಿರ್ಮಾಣದ ಸಮಯದಲ್ಲಿ ಇವರ ಮಗಳಾದ ಕು. ಉಷಾ ಮಯ್ಯ ಅವರ ನೆನಪಿನಾರ್ಥವಾಗಿ 2.75 ಲಕ್ಷ ರೂಪಾಯಿಗಳ ದೇಣಿಗೆಯನ್ನು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ್ದಾರೆ. ಇದಷ್ಟೇ ಅಲ್ಲದೆ ಜನಕಪುರಿ ಕನ್ನಡ ಕೂಟ, ತುಳು ಕೂಟ, ಮಹಿಳಾ ಮಂಡಳಿ ಹಾಗೂ ಇನ್ನೂ ಅನೇಕ ಸಂಘ–ಸಂಸ್ಥೆಗಳಿಗೆ ಧನಸಹಾಯದ ಜೊತೆಗೆ ಪ್ರೋತ್ಸಾಹವನ್ನೂ ನೀಡಿ ಪ್ರತಿ ಕಾರ್ಯಕ್ರಮದಲ್ಲಿ ತಪ್ಪದೇ ಹುರುಪಿನಿಂದ ಭಾಗವಹಿಸುತ್ತಾ ಬಂದಿದ್ದಾರೆ. ಹೃದಯ ವೈಶಾಲ್ಯತೆಯ ಆಗರವಾಗಿರುವ ಶ್ರೀಮತಿ ನೇತ್ರಾವತಿ ಮಯ್ಯನವರ ದಾನದ ಕೈಂಕರ್ಯ ಇಲ್ಲಿಗೇ ನಿಂತಿಲ್ಲ. ಮರಣೋಪರಾಂತ ತಮ್ಮ ನೇತ್ರವನ್ನು ಮಾತ್ರವಲ್ಲದೇ ತಮ್ಮ ದೇಹದ ಇತರ ಅವಯವಗಳನ್ನು ದಾನದ ರೂಪದಲ್ಲಿ AIIMS ನಲ್ಲಿನ ಜ್ಯೂನಿಯರ್ ಡಾಕ್ಟರರಿಗೆ ಉಪಯೋಗವಾಗಲೆಂದು Organ Retrieval Banking Organizationಗೆ ಉಯಿಲನ್ನು ಬರೆದು ಕೊಟ್ಟಿದ್ದಾರೆ. ತಮ್ಮ ಜೀವನದಲ್ಲಿ ಅದೆಷ್ಟೋ ನೋವುಗಳನ್ನುಂಡರೂ ಇತರರಿಗೆ ಸಹಾಯಮಾಡಬಯಸುವ ಈ ಉದಾತ್ತ ಮಹಿಳಾ ಶಿರೋಮಣಿಗೆ ನಮಿಸುತ್ತ ಮಹಿಳಾ ಮಂಡಳಿಯ ಪರವಾಗಿ ಶಾಲು ಹೊದೆಸಿ ಪುಷ್ಪಗುಚ್ಛವನ್ನಿತ್ತು ಸನ್ಮಾನಿಸಲಾಯಿತು. ಒಬ್ಬಂಟಿಯಾಗಿದ್ದರೂ ಸಹ ತಮ್ಮನ್ನು ತಾವು ಜನಕಪುರಿ ಕನ್ನಡ ಕೂಟಕ್ಕೆ ಅರ್ಪಿಸಿಕೊಂಡು, ಕೂಟದ ಅಪಾರ ಗಣ್ಯ ಸದಸ್ಯರ ತಾಯಿಯಾಗಿ, ಅಕ್ಕನಾಗಿ, ಅದೆಷ್ಟೋ ಮಕ್ಕಳಿಗೆ ಪ್ರೀತಿಯ ಅಜ್ಜಿಯಾಗಿ ಬಾಳ್ವೆ ನಡೆಸುವ ಶ್ರೀಮತಿ ನೇತ್ರಾವತಿ ಮಯ್ಯನವರು ನಮಗೆಲ್ಲರಿಗೂ ಪ್ರೇರಣೆಯಾಗಿದ್ದಾರೆ.

❑ ಸವಿತಾ ಇನಾಮದಾರ್

## ಜನಕಪುರಿ ಮಹಿಳಾ ಮಂಡಳಿಯ ನೂತನ ಕಾರ್ಯಕಾರಿ ಸಮಿತಿ



ಸವಿತಾ ಇನಾಂದಾರ್



ಮೋಹಿನಿ ರೈ



ಜಯಶ್ರೀ ಬಸವರಾಜ್



ವಂದನಾ ಶೆಟ್ಟಿ

ಜನಕಪುರಿ ಮಹಿಳಾ ಮಂಡಳಿಯ ವಾರ್ಷಿಕ ಸರ್ವ ಸದಸ್ಯರ ಸಭೆ ಮೇ 10, 2012ರಂದು ಸಾಗರ್ ರತ್ನ ಜನಕಪುರಿಯಲ್ಲಿ ನಡೆಯಿತು.

ಸರ್ವಾನುಮತದಿಂದ ಆಯ್ಕೆಯಾದ ನೂತನ ಸಮಿತಿ ಹೀಗಿದೆ–

ಶ್ರೀಮತಿ ಸವಿತಾ ಇನಾಂದಾರ್–ಅಧ್ಯಕ್ಷೆ, ಶ್ರೀಮತಿ ಮೋಹಿನಿ ರೈ–ಕಾರ್ಯದರ್ಶಿ, ಶ್ರೀಮತಿ ಜಯಶ್ರೀ ಬಸವರಾಜ್–ಜಂಟಿ ಕಾರ್ಯದರ್ಶಿ, ಶ್ರೀಮತಿ ವಂದನಾ ಶೆಟ್ಟಿ–ಖಜಾಂಚಿ.


# Saujanya Printing Press

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ

# ಎನ್. ಅರುಣ ಅವರಿಗೆ ಆತ್ಮೀಯ ಬೀಳ್ಕೊಡುಗೆ





ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್‌ನ 2010–12 ರ ಸಾಲಿನಲ್ಲಿ ಸಹಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಎನ್. ಅರುಣ ಅವರು ತಮ್ಮ ನಾಲ್ಕು ದಶಕಗಳ ದೆಹಲಿಯ ವಾಸದ ನಂತರ ಇದೀಗ ಮೈಸೂರಿಗೆ ತೆರಳಲಿದ್ದಾರೆ. ಈ ಸಲುವಾಗಿ ಅವರಿಗೆ ಆತ್ಮೀಯ ಬೀಳ್ಕೊಡುಗೆಯನ್ನು ನೀಡಲಾಯಿತು. ಲೇಡಿಸ್ ಅಸೋಸಿಯೇಶನ್ ಅಧ್ಯಕ್ಷೆ ಸ್ವರ್ಣಲತಾ ಮೃತ್ಯುಂಜಯ ಅವರು ಅರುಣ ಅವರ ಪರಿಚಯ ನೀಡಿ, ಹೂಗುಚ್ಛ ಹಾಗೂ ಸ್ಮರಣಿಕೆ ನೀಡಿ ಅಭಿನಂದಿಸಿದರು. ಮಂಡ್ಯ ಜಿಲ್ಲೆಯ ಕೆ.ಆರ್.ನಗರದಲ್ಲಿ ಹುಟ್ಟಿದ ಅರುಣ ಅವರು ಸಿಮ್ಲಾ ಹಾಗೂ ದೆಹಲಿಯಲ್ಲಿ ವ್ಯಾಸಂಗ ಮಾಡಿದರು. ದೆಹಲಿಯ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯ ಲೆಕ್ಕ ಪರಿಶೋಧಕ ವಿಭಾಗದಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿ 36 ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಅರುಣ ಅವರು ಕನ್ನಡ ಪರ ಸಂಘ ಸಂಸ್ಥೆಗಳ ಜೊತೆ ನಿಕಟ ಸಂಪರ್ಕದಲ್ಲಿದ್ದರು. ರಾಷ್ಟ್ರೀಯ ಕೇರಂ ಚಾಂಪಿಯನ್ ಆಗಿದ್ದ ಅರುಣ ಅವರು ಹಿಂದಿ ಚರ್ಚಾಸ್ಪರ್ಧೆಯಲ್ಲಿ ತಮ್ಮ ಸಂಸ್ಥೆಯ 70 ಹಿಂದಿ ಭಾಷಿಕರ ನಡುವೆಯೂ ಎಂದೂ ಮೊದಲ ಬಹುಮಾನವನ್ನು ಪಡೆದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅಭಿನಂದನೆಯನ್ನು ಸ್ವೀಕರಿಸಿದ ಅರುಣ ಅವರು ತಮ್ಮ ದೆಹಲಿಯ ವಾಸ್ತವ್ಯದಲ್ಲಿ ಪ್ರೀತಿ, ಸಹಕಾರ ನೀಡಿದ ಎಲ್ಲ ಕನ್ನಡಿಗರಿಗೆ, ಅದರಲ್ಲೂ ವಿಶೇಷವಾಗಿ ಲೇಡಿಸ್ ಅಸೋಸಿಯೇಶನ್ ಸದಸ್ಯೆಯರಿಗೆ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು ಹಾಗೂ ಭೋಜನವನ್ನು ಪ್ರಾಯೋಜಿಸಿದರು. ಇದೇ ಸಂದರ್ಭದಲ್ಲಿ 2002–2004ರ ಸಾಲಿನಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದ ಅರುಣ ಅವರಿಗೆ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಸಂಘದ ಪರವಾಗಿ ಹೂಗುಚ್ಛ ನೀಡಿ ಅಭಿನಂದಿಸಿದರು.

ಕಳೆದ 12 ವರ್ಷಗಳಿಂದ ಯೋಗ ಪರಿಣತಿಯನ್ನು ಹೊಂದಿ 9ವರ್ಷಗಳಿಂದ ಲೋಧಿ ಗಾರ್ಡನ್‌ನಲ್ಲಿ ಪ್ರತಿನಿತ್ಯ ಮುಂಜಾನೆ ಯೋಗ ತರಬೇತಿಯನ್ನು ನೀಡುತ್ತಿರುವ ಅಸೋಸಿಯೇಶನ್ ಕಾರ್ಯದರ್ಶಿ ಸುಗುಣಾ ನಾಗೇಶ್ ಅವರು ಯೋಗಾಸನ ಪ್ರದರ್ಶನ ನೀಡಿದರು. ಇಂದಿನ ಒತ್ತಡದ ಯಾಂತ್ರಿಕ ಬದುಕಿನಲ್ಲಿ ರಕ್ತದೊತ್ತಡ, ಡಯಾಬಿಟಿಸ್, ಬೆನ್ನು ನೋವು, ಬೊಜ್ಜು ಮೊದಲಾದ ದೈಹಿಕ ಸಮಸ್ಯೆಗಳಿಗೆ ಸೂಕ್ತ ಪರಿಣಾಮಕಾರಿಯಾದ ಹಲವಾರು ಆಸನಗಳನ್ನು ಹಾಗೂ ಪ್ರಾಣಾಯಾಮಗಳನ್ನು ಪ್ರದರ್ಶಿಸಿ, ಪ್ರತಿಯೊಬ್ಬರೂ ಇದರ ಸದುಪಯೋಗವನ್ನು ಪಡೆಯಬೇಕಾಗಿ ಕರೆ ನೀಡಿದರು.

❑ **ರಾಜೇಶ್ವರಿ ಕಲ್ಲೂರ್**

# ಅರಾವಳಿ ಕನ್ನಡ ಸಂಘದಿಂದ ಪ್ರೊ. ಎಸ್.ಎಸ್. ಮೂರ್ತಿ ಅವರಿಗೆ ಬೀಳ್ಕೊಡುಗೆ



ಪ್ರತಿ ವರ್ಷದಂತೆ ಅರಾವಳಿ ಕನ್ನಡ ಸಂಘದಿಂದ ಐ.ಐ.ಟಿ. ಯ ಪ್ರೊ. ಎಸ್.ಎಸ್. ಮೂರ್ತಿಯವರ ನಿವಾಸದಲ್ಲಿ ರಾಮನವಮಿ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಐ.ಐ.ಟಿ.ಯ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಕುಟುಂಬದ ಸದಸ್ಯರನ್ನೊಳಗೊಂಡು ಸುಮಾರು 50ಜನ ಸೇರಿದ್ದರು. ನೆರೆದಿದ್ದ ಸದಸ್ಯರು, ಮಹಿಳೆಯರು ಮತ್ತು ಮಕ್ಕಳಿಂದ ಸುಶ್ರಾವ್ಯವಾದ ಭಕ್ತಿ ಸಂಗೀತದ ಗಾಯನದ ನಂತರ ಸಾಮೂಹಿಕ ರಾಮಭಜನೆಯಾಯಿತು. ಐ.ಐ.ಟಿ.ಗೆ ಇತ್ತೀಚೆಗೆ ಸೇರಿದ ಹೊಸ ಅಧ್ಯಾಪಕರು ಮತ್ತು ಮಹಿಳೆಯರು ತಮ್ಮ ಗಾಯನದ ಮೂಲಕ ಹೊಸ ಪ್ರತಿಭೆಯ ಪ್ರದರ್ಶನ ಮಾಡಿದರು.

ಈ ಸಮಾರಂಭದಲ್ಲಿ ಐ.ಐ.ಟಿ.ಯ ಸೇವೆಯಿಂದ ನಿವೃತ್ತರಾಗಿ ಸದ್ಯದಲ್ಲೇ ಬೆಂಗಳೂರಿಗೆ ಸ್ಥಳಾಂತರಗೊಳ್ಳಲಿರುವ ಪ್ರೊ. ಎಸ್.ಎಸ್. ಮೂರ್ತಿ ಮತ್ತು ಕುಟುಂಬದವರಿಗೆ ಹಾರ್ದಿಕ ಬೀಳ್ಕೊಡುಗೆ ಮಾಡಲಾಯಿತು. ಸುಮಾರು 40ವರ್ಷದ ಹಿಂದೆ ಮೂರ್ತಿ ಮತ್ತು ಸಂಗಡಿಗರು ಈ ಸಂಘವನ್ನು ಸ್ಥಾಪಿಸಿದ್ದನ್ನು ಮತ್ತು ಇಲ್ಲಿಯವರೆಗೆ ಅವರು ಸಂಘಕ್ಕೆ ಮಾಡಿರುವ ಅಪಾರ ಸೇವೆ ಮತ್ತು ಬೆಂಬಲವನ್ನು ಸ್ಮರಿಸಲಾಯಿತು. ಇತ್ತೀಚಿನ ವರ್ಷಗಳಲ್ಲಿ ಸಂಘದ ಬಹುತೇಕ ಕಾರ್ಯಕ್ರಮಗಳು ಅವರ ಮನೆಯಲ್ಲೇ ನಡೆಯುತ್ತಿದ್ದು ಈ ಸಮಾರಂಭ ಇಲ್ಲಿ ನಡೆದ ಕೊನೆಯ ಸಮಾರಂಭವೆಂದು ಸದಸ್ಯರು ಕೃತಜ್ಞತೆ ವ್ಯಕ್ತಪಡಿಸಿದರು. ಸಂಘದ ಸ್ಥಾಪಕ ಅಧ್ಯಕ್ಷರೂ ಹಾಗೂ ಚೆನ್ನೈ ಐ.ಐ.ಟಿ.ಯ ಮಾಜಿ ನಿರ್ದೇಶಕ ಪ್ರೊ. ಪಿ.ವಿ. ಇಂದಿರೇಶನ್ ಅವರು ಪ್ರೊ. ಮೂರ್ತಿಯವರನ್ನು ಸನ್ಮಾನಿಸಿದರು. ಪ್ರೊ. ಮೂರ್ತಿಯವರು ಐ.ಐ.ಟಿ. ಮತ್ತು ಈ ಕನ್ನಡ ಸಂಘದೊಡನೆ 40 ವರ್ಷದ ತಮ್ಮ ಸಂಬಂಧವನ್ನು ಸ್ಮರಿಸಿ ಇಷ್ಟು ದೀರ್ಘ ಕಾಲ ಕನ್ನಡದ ಚಟುವಟಿಕೆ ನಡೆಸಿರುವುದನ್ನು ತಿಳಿಸಿಕೊಟ್ಟರು. ತಮಗೆ ಮತ್ತು ತಮ್ಮ ಕುಟುಂಬಕ್ಕೆ ಕೊಟ್ಟ ಈ ಭಾವುಕ ಬೀಳ್ಕೊಡುಗೆಗೆ ವಂದಿಸಿ, ತಮ್ಮ ಶಾಶ್ವತ ನಂಟು ಅಪಾರ ಆನಂದ ತಂದಿದೆ ಎಂದರು.

ಕೊನೆಯಲ್ಲಿ ಕುಟುಂಬದ ಸದಸ್ಯರು ತಂದಿದ್ದ ರುಚಿಯಾದ ಉಪಹಾರದೊಂದಿಗೆ ಈ ಮಿಲನ ಕಾರ್ಯಕ್ರಮ ಅಂತ್ಯಗೊಂಡಿತು.

# ಸಾಹಿತ್ಯ ಸಂಜೆಯಲ್ಲಿ ಡಾ॥ ಮೀರಾ ಚಕ್ರವರ್ತಿ



ಮೂಲತಃ ಬಂಗಾಳದ ಪ್ರಸ್ತುತ ಬೆಂಗಳೂರಿನಲ್ಲಿರುವ ಹೆಸರಾಂತ ಲೇಖಕಿ, ಅನುವಾದಕಿ ಹಾಗೂ ಮಹಿಳಾಪರ ಹೋರಾಟಗಾರ್ತಿ ಡಾ॥ ಮೀರಾ ಚಕ್ರವರ್ತಿ ಅವರು ಮೇ 26ರಂದು ಸಂಜೆ ದೆಹಲಿ ಕರ್ನಾಟಕ ಸಂಘದ ಸಾಹಿತ್ಯ ಸಂಜೆಯಲ್ಲಿ ಪಾಲ್ಗೊಂಡಿದ್ದರು. ಡೆಹರಾಡೂನ್‌ನಲ್ಲಿ ಹುಟ್ಟಿದ ಮೀರಾ ಅವರು ದೆಹಲಿಯಲ್ಲೇ ಬೆಳೆದು ವ್ಯಾಸಂಗ ಮಾಡಿದವರು. ನಂತರ ಬೆಂಗಳೂರಿನಲ್ಲಿ ನೆಲೆಸಿ ಬೆಂಗಳೂರು ವಿಶ್ವವಿದ್ಯಾಲಯದ ಸಂಸ್ಕೃತ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ ಬಳಿಕ ಇದೀಗ ಜೈನ್ ಯೂನಿವರ್ಸಿಟಿಯ ಸಂಶೋಧನಾ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನವ್ಯ ಕಾಲಘಟ್ಟದಲ್ಲಿ "ಅಸ್ತಿತ್ವವಾದ" (Existentialism) ಕುರಿತಾದ ಕೃತಿಯನ್ನು ರಚಿಸಿರುವ ಮೀರಾ ಅವರು ಕಂಬನಿ, ಮಹಿಳೆಯರ ಮುನ್ನಡೆ, ತಂತ್ರ– ಮನೋವಿಜ್ಞಾನಕ್ಕೆ ವಿಶ್ಲೇಷಣೆ ಮೊದಲಾದ ಕನ್ನಡ ಕೃತಿಗಳಲ್ಲದೇ ಬಂಗಾಳಿ ಕವನ ಸಂಕಲನವನ್ನೂ ಹೊರತಂದಿದ್ದಾರೆ. ಇವರ ಆಸಕ್ತಿಯ ಕ್ಷೇತ್ರ ಅರಿವಿನ ಅಧ್ಯಯನ (Consciousness Studies). ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಬಂಗಾಳಿ ಕಾದಂಬರಿಗಳನ್ನು ಕನ್ನಡಕ್ಕೆ ಹಾಗೂ ದೇವನೂರ ಮಹಾದೇವ ಅವರ 'ಕುಸುಮ ಬಾಲೆ'ಯನ್ನು ಬಂಗಾಳಿಗೆ ಅನುವಾದಿಸಿದ್ದಾರೆ. ಇಷ್ಟೇ ಅಲ್ಲದೇ ಶರಣರ 2,500 ವಚನಗಳನ್ನು ಬಂಗಾಳಿಗೆ ಅನುವಾದಿಸಿದ ಹೆಗ್ಗಳಿಕೆ ಮೀರಾ ಅವರದ್ದು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಅವರು ಮೀರಾ ಅವರನ್ನು ಪರಿಚಯಿಸುತ್ತಾ ಸ್ವಾಗತ ಕೋರಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಹೂಗುಚ್ಛ ನೀಡಿ ಸ್ವಾಗತಿಸಿದರು.

ಮೀರಾ ಚಕ್ರವರ್ತಿಯವರು ತಮ್ಮ ಸುದೀರ್ಘ ಅನುಭವವನ್ನು ಹಂಚಿಕೊಂಡರು. ಅವರ ಪೂರ್ವಜರು ಢಾಕಾದಿಂದ ವಲಸೆ ಬಂದವರಂತೆ. ಪದ್ಮ ನದಿಯನ್ನು ದಾಟಿ ಬಂದವರು ಹಲವಾರು ಕಡೆ ಹರಿದು ಹಂಚಿಹೋದರಂತೆ. ಹಾಗಾಗಿ ತಮ್ಮನ್ನು ತಾವು 'ಅನಿಕೇತನ' ಎಂದು ಗುರುತಿಸಿಕೊಳ್ಳುವ ಮೀರಾ ತಮ್ಮ ವ್ಯಾಸಂಗದ ನಂತರ ಬೆಂಗಳೂರಿನಲ್ಲಿ 45ವರ್ಷಗಳ ಕಾಲ ನೆಲೆಸಿ 'ಕನ್ನಡದವರೇ' ಆಗಿಬಿಟ್ಟಿದ್ದಾರೆ. ಸಾಹಿತ್ಯದ ಬಗ್ಗೆ ಅಪಾರ ಒಲವು ಇರುವ ಮೀರಾ ಅವರಿಗೆ ಸಂಸ್ಕೃತದ ಜ್ಞಾನವಿದ್ದದ್ದರಿಂದ ಬೇರೆ ಭಾಷೆಗಳನ್ನು ಕಲಿತು, ಅನುವಾದಿಸಲು ಸಹಕಾರಿಯಾಯಿತು. "ಭಾಷೆ, ಕಲೆ, ಸಂಸ್ಕೃತಿಗಳ ಕುರಿತಾದ ಪರಸ್ಪರ ಕುತೂಹಲವನ್ನು ಇಂದು ನಾವು ಕಳೆದುಕೊಂಡಿದ್ದೇವೆ. ಭಿನ್ನ ಭಿನ್ನ ಆಯಾಮಗಳನ್ನು ಗುರುತಿಸಿದಾಗ ಮಾತ್ರ ಸಂಸ್ಕೃತಿ ಜೀವಂತವಾಗಿರುತ್ತದೆ. ಹೊರದೇಶಗಳ ದಾಳಿ ಆಗಿರದ ಕಾರಣ ಕರ್ನಾಟಕದ ಸಂಸ್ಕೃತಿ, ಭಾಷೆ ತನ್ನ ನೈಜತೆಯನ್ನು ಉಳಿಸಿಕೊಂಡು ಬಂದಿದೆ. ಲಿಂಗಭೇದ, ಜಾತಿಭೇದ ಮೊದಲಾದ ಮಡಿವಂತಿಕೆ ಇಲ್ಲದ ವಚನ ಸಾಹಿತ್ಯ ಅತ್ಯಂತ ಶ್ರೀಮಂತವಾಗಿದೆ. ಅನುವಾದದ ಮೂಲಕ ಮಾತ್ರ ವಿಭಿನ್ನ ಸಂಸ್ಕೃತಿಗಳು ಹರಿದು ಬರುತ್ತವೆ" ಎಂದ ಮೀರಾ ಅವರು ತಾವು ಅನುವಾದಿಸಿದ ಶರಣರ 2,500 ವಚನಗಳ ಕುರಿತಂತೆ ಮಾತನಾಡಿದರು. ದೇವನೂರ ಮಹದೇವ ಅವರ ಕನ್ನಡದ ದೇಸೀ ಭಾಷೆಯ ಸೊಗಡಿನ "ಕುಸುಮ ಬಾಲೆ" ಕೃತಿಯನ್ನು ಅನುವಾದಿಸಿದ್ದು ನಿಜಕ್ಕೂ ಒಂದು ದೊಡ್ಡ ಸವಾಲು ಎಂದ ಅವರು ಅದನ್ನು ಬಂಗಾಳದ ಬಾವುಲು ಜನಾಂಗ ಬಳಸುವ ದೇಸೀ ಭಾಷೆಯಲ್ಲೇ ಅನುವಾದಿಸಿದ್ದಾರೆ. ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶಿವರಾಮ ಕಾರಂತ್, ಜಿ.ಎಸ್.ಎಸ್., ಯು.ಆರ್. ಅನಂತಮೂರ್ತಿ, ಕೆ.ವಿ. ಸುಬ್ಬಣ್ಣ, ಹಂಪನಾ ಮೊದಲಾದವರಿಂದ ಪ್ರೇರಿತರಾದ ಮೀರಾ ಅವರು ಕರ್ನಾಟಕ ಹಾಗೂ ಬಂಗಾಳಿ ಸಂಸ್ಕೃತಿ ಮತ್ತು ಭಾಷೆಗಳ ನಡುವಿನ ಸೇತುವೆಯಂತಿದ್ದಾರೆ.

ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು "ಭಾಷೆ ಎಂದರೆ ಸಂಸ್ಕೃತಿ. ಅದರ ಆಳಕ್ಕೆ ಇಳಿದಾಗ ಮಾತ್ರ ಅದರ ಮಹತ್ವದ ಅರಿವಾಗುತ್ತದೆ. ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಕಷ್ಟದ ಕೆಲಸ. ಶ್ರೀಮಂತವಾದ ಕನ್ನಡ ಸಾಹಿತ್ಯ ಹಾಗೂ ಬಂಗಾಳಿ ಸಾಹಿತ್ಯ, ಸಂಸ್ಕೃತಿಗಳೆರಡನ್ನೂ ಮೈಗೂಡಿಸಿಕೊಂಡಿರುವ ಮೀರಾ ಅವರು ಸಂಸ್ಕೃತಿಯ ಹರಿಕಾರರಾಗಿದ್ದಾರೆ" ಎನ್ನುತ್ತಾ ಅವರನ್ನು ಅಭಿನಂದಿಸಿದರು.

ಕರ್ನಾಟಕ ಸಂಘಕ್ಕೆ ಪ್ರೀತಿಯಿಂದ ಭೇಟಿಯಿತ್ತ ಮೀರಾ ಅವರಿಗೆ ಸಂಘದ ಸಹಕಾರ್ಯದರ್ಶಿ ಎನ್.ಆರ್. ಶ್ರೀನಾಥ್ ಧನ್ಯವಾದ ಸಮರ್ಪಿಸಿದರು.

❑ ಉಷಾ ಭರತಾದ್ರಿ

# ವಿಶ್ವ ಚಾಂಪಿಯನ್ – ವಿಶ್ವನಾಥನ್ ಆನಂದ್



ವಿಶ್ವನಾಥನ್ ಆನಂದ್ ಮಾಸ್ಕೋದಲ್ಲಿ ನಡೆದ ಇಸ್ರೇಲ್ ಎದುರಾಳಿ ಬೋರಿಸ್ ಗೆಲ್ಫಾಂಡ್ ಸವಾಲನ್ನು ಬದಿಗೊತ್ತಿ 5ನೇ ಬಾರಿ ವಿಶ್ವ ಚಾಂಪಿಯನ್ ಆಗಿ ಭಾರತೀಯರ ಹೆಮ್ಮೆಗೆ ಗರಿಮೂಡಿಸಿದರು. ಕಳೆದ ಸುಮಾರು ಒಂದೂವರೆ ದಶಕದಿಂದ ಚದುರಂಗ ಕ್ಷೇತ್ರದ ಅಗ್ರಗಣ್ಯರ ಅಗ್ರ ಪಂಕ್ತಿಯಲ್ಲಿರುವ ಆನಂದ್ ಆಟದಲ್ಲಿ ಇನ್ನು ಸಾಧಿಸುವಂಥದ್ದು ಏನೂ ಅಲ್ಲ. ಅಷ್ಟು ಎತ್ತರಕ್ಕೆ ಏರಿದ್ದಾಗಿದೆ. ಸುದೀರ್ಘ ಕಾಲದ ತಮ್ಮ ಪ್ರಸ್ತುತತೆ ಕಾಪಾಡಿಕೊಂಡು ಆಟದಲ್ಲೇ ಆನಂದ ಕಾಣುತ್ತಿರುವುದು ಅವರ ವಿಶೇಷತೆ.

ಬಾಬ್ಬಿ ಫಿಷರ್, ಅನಟೋಲಿ ಕಾರ್ಪೋವ್, ಗ್ಯಾರಿ ಕಾಸ್ಪರೋವ್ ಇವರೆಲ್ಲಾ ಚೆಸ್ ಕಂಡ ಅಪ್ರತಿಮ ಆಟಗಾರರಾದರೂ ಅನಾದಿ ಕಾಲದಿಂದಲೂ ಚದುರಂಗದ ವಿಶ್ವ ಆಡಳಿತ ಒಕ್ಕೂಟದಲ್ಲಿನ ಭಿನ್ನಾಭಿಪ್ರಾಯಗಳ ಕಾರಣದಿಂದ ಓರ್ವ ನಿರ್ವಿವಾದ ವಿಶ್ವ ಚಾಂಪಿಯನ್ ಆಗುವುದು ಸಾಧ್ಯವಾಗಿರಲಿಲ್ಲ. 90ರ ದಶಕದಲ್ಲಿ ಫಿಡೆ ವಿರುದ್ಧ ಬಂಡೆದ್ದು ಕಾಸ್ಪರೋವ್ ವೃತ್ತಿಪರ ಚೆಸ್ ಆಟಗಾರರ ಸಂಸ್ಥೆ(ಪಿಸಿಎ) ಹುಟ್ಟುಹಾಕಿದ ಮೇಲಂತೂ ಚೆಸ್ ವಿಶ್ವದಲ್ಲಿ ಇಬ್ಬರು ಚಾಂಪಿಯನ್ ಇರುವಂತಾಗಿತ್ತು. ಕೊನೆಗೂ 2006ರಲ್ಲಿ ಎಲ್ಲಾ ಗೊಂದಲಗಳೂ ಬಗೆಹರಿದ ಮೇಲೆ ಏಕೀಕೃತ ವಿಶ್ವ ಚಾಂಪಿಯನ್ ನಡೆದು ರಷ್ಯಾದ ವ್ಲಾಡಿಮಿರ್ ಕ್ರಾಮ್ನಿಕ್ ಚಾಂಪಿಯನ್ ಪಟ್ಟಕ್ಕೇರಿದರು. ಅದರ ಮಾರನೇ ವರ್ಷ ಕ್ರಾಮ್ನಿಕ್‌ರನ್ನು ಸೋಲಿಸಿದ ಆನಂದ್ ಮೊದಲ ಬಾರಿ ನಿರ್ವಿವಾದ ವಿಶ್ವ ಚಾಂಪಿಯನ್ ಎನಿಸಿದರು. ಆನಂತರ ಅವರು ಆ ಪಟ್ಟವನ್ನು ಯಾರಿಗೂ ಬಿಟ್ಟುಕೊಟ್ಟಿಲ್ಲ.

ಭಾರತದಲ್ಲಂತೂ ಆನಂದ್ ಸರ್ವಶ್ರೇಷ್ಠ ಕ್ರೀಡಾಪಟು ಎನ್ನುವುದರಲ್ಲಿ ಎರಡು ಮಾತಿಲ್ಲ. ಕ್ರಿಕೆಟ್ ಹುಚ್ಚಿನ, ಹಾಕಿ ರಾಷ್ಟ್ರೀಯ ಕ್ರೀಡೆ ಎನಿಸಿಕೊಂಡಿರುವ ಈ ದೇಶದಲ್ಲಿ ಸರ್ವಶ್ರೇಷ್ಠ ಆಟಗಾರನ ಪಟ್ಟಕ್ಕೆ ಸಾಕಷ್ಟು ಪೈಪೋಟಿ ಇದೆ. ಆದರೂ, ಭಾರತದಲ್ಲಿ ಚದುರಂಗದ ಕ್ಷಿಪ್ರಕ್ರಾಂತಿಗೆ ಕಾರಣರಾದ ಆನಂದ್ ಎಲ್ಲರಿಗಿಂತ ಶ್ರೇಷ್ಠ ಎಂಬ ವಾದವನ್ನು ಕ್ರಿಕೆಟ್‌ನ ಸಚಿನ್ ತೆಂಡೂಲ್ಕರ್ ಮತ್ತು ಹಾಕಿಯ ದಂತಕಥೆ ಧ್ಯಾನ್‌ಚಂದ್ ಸಹ ಒಪ್ಪಬಹುದು. ಕ್ರಿಕೆಟ್, ಹಾಕಿ ಕ್ರೀಡೆಗಳಲ್ಲಿ ಓರ್ವ ಆಟಗಾರನ ಹಿರಿಮೆಯ ಜತೆಗೆ ತಂಡದ ಕೊಡುಗೆಯೂ ಇರುತ್ತದೆ. ಮತ್ತವು ಪ್ರೇಕ್ಷಕ ಸ್ನೇಹಿ ಕ್ರೀಡೆಗಳು. ಹೀಗಿರುವಾಗ ಆನಂದ್ ನಡೆಸಿದ್ದು ಏಕವ್ಯಕ್ತಿ ಹೋರಾಟ. 1987ರಲ್ಲಿ ಅವರು ತಮ್ಮ 18ನೆಯ ವಯಸ್ಸಿನಲ್ಲಿ ಗ್ರಾಂಡ್‌ಮಾಸ್ಟರ್ ಪಟ್ಟಕ್ಕೇರಿದಾಗ ಅವರು ಭಾರತದ ಮೊಟ್ಟಮೊದಲ ಗ್ರಾಂಡ್‌ಮಾಸ್ಟರ್ ಆಗಿದ್ದರು. ಆ ಕಾಲದಲ್ಲಿ ಚೆಸ್ ಎಂದರೆ ರಷ್ಯಾ, ಕಾರ್ಪೋವ್ ಮತ್ತು ಕಾಸ್ಪರೋವ್ ಅವರ ಎದುರು ನಾವೆಲ್ಲಿ ಎಂಬ ಹಿಂಜರಿಕೆ ಇತ್ತು, ಅದನ್ನು ಮುರಿದು ನಾವೂ ಚೆಸ್ ಆಡಬಲ್ಲೆವು ಎಂದು ವಿಶ್ವಕ್ಕೆ ತೋರಿಸಿಕೊಟ್ಟ ವಿಶ್ವನಾಥನ್ ಆನಂದ್ ಅವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

**Delhi Karnataka Sangha's Abhimatha Monthly,**
**June -2012, Price Rs.1/- RNI Regn. No. 53405/91, DL-SW-15/4016/10-11-12**
**Printout Date : June 8th / 9th, Postal Date :10th / 11th, Total Pages-16**



Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770